ಶಾಸನರಚನಾ ಕಾರ್ಯಕಲಾಪಗಳು

೧೯೮೮ನೇ ಇಸವಿಯ ಕರ್ನಾಟಕ ಧನವಿನಿಯೋಗ(ಸಂಖ್ಯೆ ೨)ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಅಧ್ಯಕ್ಷರು.—ಈ ವಿಧೇಯಕವನ್ನು ಮಂಡಿಸಲು ರಾಜ್ಯಪಾಲರು ಅನುಮತಿ ನೀಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ೧೯೮೮ನೇ ಇಸವಿಯ ಕರ್ನಾಟಕ ಧನವಿನಿಯೋಗ (ಸಂಖ್ಯೆ ೨) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೮೮ನೇ ಇಸವಿಯ ಕರ್ನಾಟಕ ಧನವಿನಿಯೋಗ (ಸಂಖ್ಯೆ ೨) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು'',

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಮಂಡಿಸಲು ಅನುಮತಿನೀಡಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ,
''೧೯೮೮ನೇ ಇಸವಿಯ ಕರ್ನಾಟಕ ಧನವಿನಿಯೋಗ(ಸಂಖ್ಯೆ ೨) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ''

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.

೧೯೮೮ನೇ ಇಸವಿಯ ಕರ್ನಾಟಕ ಧನವಿನಿಯೋಗ (ಸಂಖ್ಯೆ ೨)ವಿಧೇಯಕ ಪರ್ಯಾಲೋಚನಾಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ,

೧೯೮೮ನೇ ಇಸವಿಯ ಕರ್ನಾಟಕ ಧನವಿನಿಯೋಗ(ಸಂಖ್ಯೆ ೨)ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಈ ಎಲ್ಲಾ ಬೇಡಿಕೆಗಳ ಮೇಲೆ ವಿಫಲವಾದಂಥ ಹಾಗೂ ಹಿಂದಿನ ವರ್ಷಗಳಲ್ಲಿ ಇದ್ದ ಸಮಯಕ್ಕಿಂತ ಕಿಚ್ಚು ಸಮಯದವರೆಗೆ ಮಾನ್ಯ ಸದಸ್ಯರುಗಳು ಚರ್ಚೆಯನ್ನು ಮಾಡಿದ್ದಾರೆ ಈ ಚರ್ಚೆಗೆ ನನ್ನ ದೃಷ್ಟಿಯಲ್ಲಿ ಎಲ್ಲಾ ಸನ್ಮಾನ್ಯ ಮಂತ್ರಿಗಳು ಸಮರ್ಪಕವಾದಂಥ ಹಾಗೂ ಅಂಕಿ ಅಂಶಗಳ ಸಮೇತವಾದಂತ ಉತ್ತರವನ್ನು ಕೊಟ್ಟಿದ್ದಾರೆ ಈ ಹಿನ್ನೆಲೆಯಲ್ಲಿ ಇದೊಂದು ತಾತ್ಕಾಲಿಕವಾದ ವಿಧೇಯಕ . ಇದಕ್ಕೆ ಮಾನ್ಯ ಸದಸ್ಯರೆಲ್ಲರೂ ತಮ್ಮ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸಿ ಇದನ್ನು ಪಾಸ್ ಮಾಡಿಕೊಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಮನವಿ ಮಾಡುತ್ತೇನೆ.

†ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ಉಪನಾಯಕರು).—ಮಾನ್ಯ ಅಧ್ಯಕ್ಷರೆ, ಇದರಲ್ಲಿ ಹೇಳತಕ್ಕಂಥಾದ್ದು ಏನಿಲ್ಲ. ಒಂದು ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಕ್ಲಾರಿಫೈ ಮಾಡಬೇಕು ಏಕೆಂದರೆ ನಾವು ಎಷ್ಟು ಮಾತನಾಡಿದರೂ ಕೂಡ ಬಜೆಟ್‌ನಲ್ಲಿ, ನಾವು ಎಲ್ಲವನ್ನೂ ಪಾಸ್‌ಮಾಡುತ್ತೇವೆ. ಪಾಸ್ ಮಾಡಿಕೊಟ್ಟ ಮೇಲೆ ಅನೇಕ ಕೆಲಸಗಳ ಬಗ್ಗೆ ಬಜೆಟ್‌ನಲ್ಲಿ ಅಮೌಂಟ್ ಪ್ರಾವಿಜನ್ ಮಾಡಿದ್ದರೂ ಕೂಡಾ ಅನೇಕ ಕೆಲಸಗಳಿಗೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡುವುದಿಲ್ಲ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಏನುತ್ತಾರೆ ಎಂದರೆ ಮಾನ್ಯ ಮುಖ್ಯ ಮಂತ್ರಿಗಳಿಂದ ಆದೇಶ ಬಂದರೆ ಮಾತ್ರ ಇದನ್ನು

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಾವು ತೆಗೆದುಕೊಳ್ಳುತ್ತೇವೆ, ಇಲ್ಲದೇ ಹೋದರೆ ಇಲ್ಲ ಎಂದು ಹೇಳುತ್ತಾರೆ. ಟೀಚರ್ಸ್ ಪೋಸ್ಟ್ ಆಗಲೀ, ಯಾವುದೇ ಪೋಸ್ಟ್ ಫಿಲಪ್ ಮಾಡಬೇಕಾದರಾಗಲೀ, ಸಿಂಗಲ್ ವೇಕೆನ್ಸಿ ಆಗಲಿ ಇವತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗಿ ಅಪ್ರೂವ್ ಆಗಿ ಬರಬೇಕಾಗಿದೆ. ರೊಟ್ಟಿನ್ ಕೋರ್ಸ್‌ನಲ್ಲಿರ ತಕ್ಕ ಕೆಲಸ ಕೂಡ, ಅಪ್ರೂವ್ ಆಗಿ ಬಂದ ಮೇಲೆ ನಾವು ತೆಗೆದುಕೊಳ್ಳುತ್ತೇವೆ ಇಲ್ಲದೇ ಹೋದರೆ ಆರ್ಡರ್ ಇಷ್ಯೂ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಅದು ಗ್ರಾಂಟ್ ಇನ್ ಏಡ್ ಇನ್‌ಸ್ಟಿಟೂಷನ್ ಇರಬಹುದು, ರೆಗ್ಯುಲರ್ ಪೋಲೀಸ್ ಅಥವಾ ಹೆಲ್ತ್ ಡಿಪಾರ್ಟ್‌ಮೆಂಟ್ ಇರ ಇಹುದು ಎಲ್ಲಾಕಡೆ ಇದೇ ರೀತಿಯಾಗಿದೆ. ಅನೇಕ ಡಾಕ್ಟರ್ಸ್ ಪೋಸ್ಟ್‌ಗಳು ಇವತ್ತು ಖಾಲಿ ಇದೆ. ಪಬ್ಲಿಕ್ ಸರ್ವೀಸ್ ಕಮೀಷನ್‌ರವರು ೩೫೦ ಜನ ಡಾಕ್ಟರ್ಸ್‌ನ್ನು ಸೆಲೆಕ್ಟ್ ಮಾಡಿ ಲಿಸ್ಟ್ ಅನೌನ್ಸ್ ಮಾಡಿದರೂ ಕೂಡ ತಾವು ಇವತ್ತು ೨೦೦ ಜನಕ್ಕೆ ಅಪಾಯಿಂಟ್‌ಮೆಂಟ್ ಕೊಟ್ಟಿರುವುದು ೨೫೦ ಜನಕ್ಕೆ ಇನ್ನೂ ಕೆಲಸ ಕೊಟ್ಟಿಲ್ಲ. ಕಾರಣ ಕೇಳಿದರೆ ಎಕಾನಮಿ ಆರ್ಡರ್ ಎಂದು ಹೇಳುತ್ತಾರೆ. ಮೊನ್ನೆ ಕೇಳಿದಾಗ ನಾವು ಇದರ ಬಗ್ಗೆ ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ, ಆರ್ಡರ್ ಇಷ್ಯೂ ಮಾಡುತ್ತೇವೆ ಎಂದು ಮಾನ್ಯ ರಾಚಯ್ಯನವರು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳೂ ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಪೋಲೀಸ್ ಡಿಪಾರ್ಟ್‌ಮೆಂಟ್ ಹೆಲ್ತ್ ಡಿಪಾರ್ಟ್‌ಮೆಂಟ್ ಮತ್ತು ಎಜುಕೇಷನ್ ಡಿಪಾರ್ಟ್‌ಮೆಂಟ್ ಇವು ಮೂರು ಕೂಡ ಎಸ್ಸೆನ್ಷಿಯಲ್ ಸರ್ವೀಸ್‌ನಲ್ಲಿ ಬರುತ್ತವೆ. ತಕ್ಷಣ ಅದಕ್ಕೆ ರಿಲ್ಯಾಕ್ಸ್ ಮಾಡಿರುತ್ತೇವೆ ಎಂದು ಹೇಳಿದರು. ಆದರೆ ಇಲ್ಲಿಯವರೆಗೂ ಕೂಡ ಕೆಲವು ಫೈಲ್‌ಗಳು ನೇರವಾಗಿ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಬಂದು ಹೋಗುತ್ತವೆಯೇ ಹೊರತಾಗಿ ಕನ್‌ಫರ್ಮ್ ಡೈರೆಕ್ಟರ್ ಆರ್ಡರ್ ಇಷ್ಯೂ ಮಾಡತಕ್ಕ ಪರಿಸ್ಥಿತಿ ಇದುವರೆಗೆ ಇಲ್ಲ. ತಾವು ಇವ್ರಿಗೆಗಳಿಗೆ ಕ್ಲಾರಿಫೈ ಮಾಡಿದರೆ ನಾವು ಇದನ್ನು ಪಾಸ್ ಮಾಡಿಕೊಡುತ್ತೇವೆ. ಈಗ ಈ ಬಗ್ಗೆ ಹೆಚ್ಚು ಮಾತನಾಡತಕ್ಕಂಥ ಅವಶ್ಯಕತೆ ಏನೂ ಇಲ್ಲ. ನಾವು ಇಷ್ಟು ಸಲೀಸಾಗಿ ಪಾಸು ಮಾಡಿ ಕೊಟ್ಟರೂ ಕೂಡ ಅನೇಕ ಖಾತೆಗಳಲ್ಲಿ ತೊಂದರೆ ಆಡ್ಮಿನಿಸ್ಟ್ರೇಷನ್‌ಗಳು ಇವೆ. ತಾವು ಓಪನ್‌ಲಿ ಡಿಪಾರ್ಟ್‌ಮೆಂಟ್ಸ್‌ಗೆ ಸೂಚನೆ ಕೊಟ್ಟು ಇರತಕ್ಕಂಥ ವೇಕೆನ್ಸಿಗಳನ್ನು ಅಪಾರ್ ಫಿಲಪ್ ಮಾಡಿಕೊಳ್ಳಬಹುದು, ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಬರತಕ್ಕಂಥ ಅವಶ್ಯಕತೆ ಇಲ್ಲವೆಂದು ಹೇಳಬೇಕು. ಆಮೇಲೆ ತಾವು ಬಡ್ಜೆಟ್‌ನಲ್ಲಿ ಟೋಕನ್ ಗ್ರಾಂಟ್ ಅಂತ ಇಡುತ್ತೀರಿ. ಹತ್ತು ರೂಪಾಯಿ, ಒಂದು ಸಾವಿರ ಅಥವಾ ಒಂದು ಲಕ್ಷ ರೂಪಾಯಿಗಳು ಎಂದು, ಆ ಯೋಜನೆಗಳಿಗೆ ಒಂದು ಕೋಟಿ ರೂಪಾಯಿಗಳ ಖರ್ಚು ಬರುತ್ತದೆಂದು ತಾವು ಆ ಕೆಲಸವನ್ನು ತೆಗೆದುಕೊಳ್ಳುವುದಿಲ್ಲ. ಟೋಕನ್ ಗ್ರಾಂಟ್ ಮಾತ್ರ ಇಟ್ಟಿರುತ್ತೀರಿ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕ್ಲಾರಿಫೈ ಮಾಡಿದರೆ ಸರಿಯಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ ನಾನು ಈ ವಿಚಾರವನ್ನು ಅತಿ ಸ್ಪಷ್ಟವಾಗಿ ಇನ್ನು ಮುಂದೆ ಈ ತರಹದ ಸಂದೇಹವುಂಟಾಗದೆ ಇರುವ ದೃಷ್ಟಿಯಿಂದ ಮತ್ತು ನಮ್ಮ ಸರ್ಕಾರದ ಬಗ್ಗೆ ಅಪಪ್ರಚಾರವಾಗದಿರುವ ಬಗ್ಗೆ ನಾನು ಸ್ಪಷ್ಟಪಡಿಸಬೇಕಾಗುತ್ತದೆ.

ಶ್ರೀ ಪುಲ್ಲಿಕಾರ್ಜುನ ಎಂ. ಖರ್ಗೆ.—ಅಪಪ್ರಚಾರ ಏತಕ್ಕೆ ಆಗುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ.—ಬೇಕಾದಷ್ಟು ಅಪಪ್ರಚಾರವಾಗಿದೆ. ನಾನು ಈ ಮನೆಯಲ್ಲಿಯೇ ನನ್ನ ಇಲಾಖಾ ಬೇಡಿಕೆಗಳಿಗೆ ಉತ್ತರ ಕೊಡುವ ಸಂದರ್ಭದಲ್ಲಿ ಹೇಳಿದ್ದೇನೆ. ಬೇರೆ ರಾಜ್ಯಗಳಲ್ಲಿ ಟೋಟಲ್ ಆಗಿ ಈ ಬಗ್ಗೆ ಬ್ಯಾನ್ ಆರ್ಡರ್ ಇದೆ. ಸ್ಯಾಂಕ್ಷನ್ ಪೋಸ್ಟ್‌ನ್ನು ಸಹ ತುಂಬುವುದಿಲ್ಲ. ಆದರೆ ನಾನು ಇಲ್ಲಿ ಆ ಒಂದು ಬ್ಯಾನ್ ಆರ್ಡರ್ ಅನ್ನು ತೆಗೆದು ಹಾಕಿದ್ದೇನೆ. ಸ್ಯಾಂಕ್ಷನ್ ಪೋಸ್ಟ್‌ನ್ನು ಫಿಲ್ಲಪ್ ಆಗುತ್ತಿವೆ. ಆದರೆ ವಿಧಿಪತ್ಯಾಗಿ ಸೆಲೆಕ್ಷನ್ ಆಗುವುದು ಮತ್ತು ಆದನ್ನು ಭರ್ತಿ ಮಾಡ ತಕ್ಕಾಂಥದ್ದು ಏನಿದೆ ಆದರಲ್ಲಿ ಸ್ವಲ್ಪ ತಡವಾಗಿದ್ದರೆ ಅದಕ್ಕೆ ನಾನು ಜವಾಬ್ದಾರಿಯಲ್ಲ. ಆ ಒಂದು ಪ್ರೊಸೀಜರ್‌ನಲ್ಲಿ ವಿಳಂಬವಾಗಿರಬಹುದು. ಮಾನ್ಯ ಸದಸ್ಯನಿಯವರಾದ ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಒಂದು ಪ್ರಶ್ನೆಯನ್ನು ಕೇಳಿದ್ದರು. ಅದೇನೆಂದರೆ ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ನೇಮಕಕ್ಕೆ ಆಡ್ವರ್‌ಟೈಜ್‌ಮೆಂಟ್ ಕೊಟ್ಟಿದ್ದೀರಿ, ಸೆಲೆಕ್ಷನ್ ಕೂಡ ಮಾಡಿದ್ದೀರಿ, ಆದರೆ ಇನ್ನೂ ಅವರಿಗೆ ಅಪಾಯಿಂಟ್‌ಮೆಂಟ್ ಆರ್ಡರ್ ಕೊಟ್ಟಿಲ್ಲವೆಂದು; ನಿಜ, ತಡ ಆಗಿದೆ. ಅಪಾಯಿಂಟ್‌ಮೆಂಟ್ ಆರ್ಡರ್‌ಗಳನ್ನು ನಾವೀಗ ಹೊರಡಿಸುತ್ತಿದ್ದೇವೆ. ಆಮೇಲೆ ಡಾಕ್ಟರ್ಸ್ ಇರಬಹುದು, ಶಿಕ್ಷಕರು ಇರಬಹುದು, ಪೋಲೀಸ್ ಇಲಾಖೆ ಇರಬಹುದು, ಈ ಮೂರು ಇಲಾಖೆಗಳನ್ನು ಅಗತ್ಯ ಸೇವೆಗಳೆಂದು ತೀರ್ಮಾನ ಮಾಡಿದ್ದೇವೆ. ಇದಕ್ಕೆ ಮಿತವ್ಯಯ ಅನ್ವಯವಾಗುವುದಿಲ್ಲ. ಯಾವುದೇ ಸ್ಯಾಂಕ್ಷನ್ ಪೋಸ್ಟ್‌ನ ಇದ್ದರೆ ಅವುಗಳನ್ನು ತುಂಬಬಹುದು, ಆದರೆ ಹೊಸದಾಗಿ ಸ್ಯಾಂಕ್ಷನ್ ಮಾಡಬೇಕಾದರೆ ಅದು ಕ್ಯಾಬಿನೇಟ್ ಮುಂದೆ ಬರಬೇಕಾಗುತ್ತದೆ. ಎಷ್ಟು ಜಾಗಗಳು

ಖಾಲಿ ಇವೆ ಎನ್ನುವುದನ್ನು ನೋಡಬೇಕಾಗುತ್ತದೆ. ಬೇರೆ ಬೇರೆ ಖಾತೆಗಳಲ್ಲಿ ಕೂಡ ಸುಮಾರು 68-69 ಸಾವಿರ ಹುದ್ದೆಗಳು ಖಾಲಿ ಇರಬಹುದೆಂದು ಹೇಳಿದರು. ನಮ್ಮ ರಾಜ್ಯ ಸರ್ಕಾರದಲ್ಲಿ ಸುಮಾರು ನಾಲ್ಕುವರೆ ಲಕ್ಷ ಜನ ನೌಕರರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಖಾಲಿ ಇರುವಂತಹ ಹುದ್ದೆಗಳು 42-43 ಸಾವಿರ ಮಾತ್ರ. 68-69 ಸಾವಿರ ಹುದ್ದೆಗಳು ಅಲ್ಲ. ಯಾವ ಸರ್ಕಾರವಾದರೂ ಕೂಡ ಕೆಲವು ಹುದ್ದೆಗಳು ಖಾಲಿ ಇರುತ್ತವೆ. ಪ್ರತಿ ವರ್ಷ ಸುಮಾರು 30 ಸಾವಿರ ಜನ ರಿಟೈರ್ ಆಗುತ್ತಾರೆ. ಸಾವಿರಾರು ಜನ ಸರ್ವೀಸ್ ಮಧ್ಯದಲ್ಲಿಯೇ ಮೃತರಾಗುತ್ತಾರೆ. ಅಥವಾ ರಾಜೀನಾಮೆಯನ್ನು ಕೊಡುತ್ತಾರೆ. ಆಗ ಜಾಗ ಖಾಲಿ ಬೀಳುತ್ತವೆ. ಸಾಲಿಯಾಗತಕ್ಕಂಥ ಹುದ್ದೆಗಳ ಸಂಖ್ಯೆ ಹೆಚ್ಚೇನು ಇಲ್ಲವೆಂದು ನಾನು ಹೇಳಬಯಸುತ್ತೇನೆ. ಇನ್ನು ಬಡ್ಜೆಟ್‌ನಲ್ಲಿಟ್ಟಿರತಕ್ಕಂಥ ಹಣ ಖರ್ಚಾಗುವುದಿಲ್ಲವೆಂದು ಹೇಳಿದರು. ಕೆಲವು ಸಂದರ್ಭದಲ್ಲಿ ಖರ್ಚಾಗುವುದಿಲ್ಲ. ಏತಕ್ಕೆಂದರೆ ನಾವು ಬಡ್ಜೆಟ್ ತಯಾರು ಮಾಡುವಾಗ ಒಂದು ದೊಡ್ಡ ಕನಸು ಇಟ್ಟುಕೊಂಡು ಮಾಡುತ್ತೇವೆ. ಹಿಂದಿನ ಬಡ್ಜೆಟ್‌ನಲ್ಲಿ ಹೇಳಿದ್ದ ವಿಷಯವನ್ನು ನಾನು ಮೊನ್ನೆ ಪ್ರಸ್ತಾಪ ಮಾಡಿದೆ. ಸುಮಾರು 300 ಕೋಟಿ ರೂಪಾಯಿಗಳನ್ನು ಇರಿಗೇಶನ್‌ಗೆ ಕೊಡಬೇಕೆಂದು ಆಗಿನ ಕನಸು ಆಗಿತ್ತು. ಆದರೆ ಹಣಕಾಸಿನ ಪರಿಸ್ಥಿತಿ ಕೆಟ್ಟಿದ್ದರಿಂದ ಅಷ್ಟು ಹಣ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಈಗ ಬೇರೆ ಬೇರೆ ಖಾತೆಗಳಲ್ಲಿರುವ ಜಾಬ್ ಸ್ಲಾಟಿಂಗ್‌ಗೆ ಪೇಮೆಂಟ್ ಏನಿದೆ ಅದನ್ನು ನೋಡಿದರೆ ವರ್ಷಕ್ಕಾಗುವಂತೆ ನಾವು ಲೆಟರ್ ಆಫ್ ಕ್ರೆಡಿಟ್ ಇಶ್ಯೂ ಮಾಡುತ್ತೇವೆ. ನಾವು ನೌಕರರಿಗೆ ಕೊಡಬೇಕಾಗಿರುವ ಸಂಬಳದಲ್ಲಿ ಇದುವರೆವಿಗೂ ಒಂದು ದಿವಸ ತಡ ಮಾಡಿಲ್ಲ. ಶಿಕ್ಷಕರ ಸಂಬಳ ಸಹ ತಡ ಮಾಡಿಲ್ಲ. ಆದರೆ ಯಾವ ಅನುದಾನ ಶಾಲೆಗಳು ಇವೆ ಆ ಅನುದಾನ ಶಾಲೆಗಳವರು ಕೆಲವು ಕಂಡೀಷನ್ಸ್ ಅನ್ನು ಫುಲ್‌ಫಿಲ್ ಮಾಡದೆ ಇದ್ದಿದ್ದರಿಂದ ತಡವಾಗಿರಬಹುದು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ಸತ್ಯಾಗ್ರಹ ಮಾಡಿ ಸಂಬಳ ತೆಗೆದುಕೊಂಡರು,

ಶ್ರೀ ರಾಮಕೃಷ್ಣ ಹೆಗಡೆ.—ಅಂತಹ ಪರಿಸ್ಥಿತಿಯನ್ನು ತರುವುದಕ್ಕೆ ನಾನು ಬಿಡುವುದಿಲ್ಲ. ಮತ್ತು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಅಭಿವೃದ್ಧಿ ಕೆಲಸಕಾರ್ಯಗಳಿಗೆ ಅಲ್ಲಿನ ನೌಕರರಿಗೆ ಸಂಬಳ ಕೊಡುವುದರಲ್ಲಿಯೂ ಸಹ ಯಾವುದೇ ವಿಳಂಬವಾಗಿಲ್ಲ ಎನ್ನುವ ಆಶ್ವಾಸನೆ ಅವರಿಗೆ ಕೊಡುತ್ತೇನೆ. ನಾನು ಇಷ್ಟು ಮಾತ್ರ ಹೇಳಲಿಕ್ಕೆ ಬಯಸುತ್ತೇನೆ, ಏನೆಂದರೆ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ ನಿಮಗೂ ಇದು ಗೊತ್ತಿದೆ. ನೀವೇ ನಿಜ ಹೇಳಿ. ಸಂಬಳ ಕೊಡುವುದರಲ್ಲಿ ವಿಳಂಬವಾಗಿಲ್ಲವೇ ?

ಶ್ರೀ ರಾಮಕೃಷ್ಣ ಹೆಗಡೆ.—ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಮಾಡಿಸುವ ಅಭಿವೃದ್ಧಿ ಕೆಲಸಗಳಿಗೆ ಹಾಗೂ ಅವರ ನೌಕರರಿಗೆ ಸಂಬಳ ಕೊಡಬೇಕಾದ ಹಣದಲ್ಲಿ ಯಾವುದೇ ರೀತಿಯಲ್ಲಿ ವಿಳಂಬ ಆಗುತ್ತಿಲ್ಲ ಎಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಅಧ್ಯಕ್ಷರು.—ವೆಂಕಟರಾಮಯ್ಯನವರೇ ನೀವು ಕೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಮುಖ್ಯ ಮಂತ್ರಿಯವರನ್ನು ಕೇಳಿಕೊಳ್ಳುವುದೇನೆಂದರೆ, ರಾಜ್ಯದಲ್ಲಿರುವ ಪ್ರೈಮರಿ ಸ್ಕೂಲುಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಟೀಚರ್ಸ್‌ಗಳನ್ನು ಅಪಾಯಿಂಟ್ ಮಾಡಿಲ್ಲ. ಖಾಲಿ ಇರುವ ಟೀಚರ್ಸ್ ಹುದ್ದೆಗಳನ್ನು ಭರ್ತಿ ಮಾಡುತ್ತೇವೆಂದು ನೀವು ಆಶ್ವಾಸನೆಯನ್ನು ಕೊಡುತ್ತಲೇ ಇದ್ದೀರಿ. ಆದರೆ, ನೀವು ಕೊಟ್ಟ ಆಶ್ವಾಸನೆಯ ಪ್ರಕಾರ ಟೀಚರ್ಸ್‌ಗಳನ್ನು ಅಪಾಯಿಂಟ್ ಮಾಡಿಲ್ಲ. ಈಗಿರುವ ಟೀಚರ್ಸ್‌ಗಳು ಒಂದು ರೀತಿ ಓನ್ ಬೈಟು ಸರ್ವೀಸ್ ತರಹ ಕೆಲಸ ಮಾಡುತ್ತಿದ್ದಾರೆ. ಬೆಳಿಗ್ಗೆ ಒಂದು ಕಡೆ ಪಾಠ ಮಾಡಿ ಮಧ್ಯಾಹ್ನ ಇನ್ನೊಂದು ಕಡೆ ಪಾಠ ಮಾಡಬೇಕಾದ ಪರಿಸ್ಥಿತಿ ಇವತ್ತು ಟೀಚರ್‌ಗಳಿಗೆ ಬಂದಿದೆ. ಪ್ರೈಮರಿ ಸ್ಕೂಲುಗಳಿಗೆ ಮತ್ತು ಹೈಸ್ಕೂಲುಗಳಿಗೆ ಟೀಚರ್‌ಗಳನ್ನು ನೇಮಕ ಮಾಡುವ ಬಗ್ಗೆ ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಯಾವುದೇ ರೀತಿಯ ಅಡ್ಡಿ ಬರಬಾರದೆಂದು ಸರ್ಕಾರ ಹೇಳಬೇಕು. ಎರಡನೆಯದಾಗಿ ಕೇಳುವುದೇನೆಂದರೆ, ಮುಖ್ಯ ಮಂತ್ರಿಯವರೇ ನಮ್ಮ ಕೋಲಾರ ಜಿಲ್ಲೆಗೆ ಒಂದು ಸಾರಿ ಬಂದಿದ್ದಾಗ 6 ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಕೋಲಾರ ಜಿಲ್ಲೆಯಲ್ಲಿ ಮಾಡುತ್ತೇವೆಂದು 20 ಸಾವಿರ ಜನರ ಕ್ರೌಡ್ ಮುಂದೆ ಆಶ್ವಾಸನೆ ಕೊಟ್ಟಿದ್ದರು. ಇದುವರೆಗೂ ಎರಡು ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಮಾತ್ರ ಮಂಜೂರು ಮಾಡಲಾಗಿದೆ. ಇನ್ನೂ 4 ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಮಂಜೂರು ಮಾಡಿಲ್ಲ. ಇದರಿಂದ ನಾವು ನಗೆಪಾಟಲಿಗೆ ಈಡಾಗಿದ್ದೇವೆ, ತಾವು ಇವರ ಬಗ್ಗೆ ಗಮನ ಹರಿಸಿ ತಾವು ಕೊಟ್ಟ ಆಶ್ವಾಸನೆ ಪ್ರಕಾರ

ಉಳಿದ ಕೆಲಸಗಳನ್ನೂ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ ಕೇಳುವುದೇನೆಂದರೆ, ಕೋಲಾರ ಜಿಲ್ಲೆಯಲ್ಲಿ ಒಂದು ಕೋ-ಆಪರೇಟೀವ್ ಟೆಕ್ಸ್‌ಟೈಲ್ ಮಿಲ್ ಅನ್ನು ಓಪನ್ ಮಾಡುವುದಕ್ಕೆ ತಾವು ಒಪ್ಪಿಕೊಂಡಿದ್ದೀರಿ. ಆದರೆ ಇದುವರೆಗೂ ಆ ಬಗ್ಗೆ ಸ್ವಲ್ಪ ಹಣವನ್ನೂ ಕೊಡಲಿಲ್ಲ. ಇದರ ಬಗ್ಗೆಯೂ ತಾವು ಕೆಲಸ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವೆಂಕಟರಾಮಯ್ಯನವರು ಆದನ್ನು ಮಾಡಿಸಿಕೊಡಬೇಕು, ಇದನ್ನು ಮಾಡಿಸಿಕೊಡಬೇಕೆಂದು ಡಿಮ್ಯಾಂಡ್ ಮೇಲೆ ಮಾತನಾಡುವ ರೀತಿಯಲ್ಲಿ ಮಾತನಾಡಿದ್ದಾರೆ. ಕೋಲಾರದಲ್ಲಿ ಟ್ರೈರಿಗೇಷನ್ ಪ್ರಾಜೆಕ್ಟ್‌ಗಳನ್ನು ಮಾಡಲಾಗುತ್ತದೆಂದು ಹೇಳಿರುವುದರಲ್ಲಿ ಈಗಾಗಲೇ ೨ ಇರಿಗೇಷನ್ ಪ್ರಾಜೆಕ್ಟ್ ಮಾಡಲಾಗಿದೆಯೆಂದು ಮಾನ್ಯ ವೆಂಕಟರಾಮಯ್ಯನವರೇ ಹೇಳಿದ್ದಾರೆ. ಅಂದರೆ ೩ಳ ಪರ್ಸೆಂಟ್‌ನಷ್ಟು ಕೆಲಸವನ್ನು ನಾವು ಮಾಡಿದ್ದೇವೆ ಎಂದ ಹಾಗೆ ಆಯಿತು. ಇನ್ನು ಉಳಿದ ೬೬ ಪರ್ಸೆಂಟ್ ಕೆಲಸವನ್ನು ಇನ್ನು ಮುಂದೆ ಮಾಡಿಸಲಾಗುತ್ತದೆ. ಆಮೇಲೆ, ಪ್ರೈಮರಿ ಸ್ಕೂಲುಗಳಲ್ಲಿ ಮತ್ತು ಹೈಸ್ಕೂಲುಗಳಲ್ಲಿ ಎಲ್ಲೆಲ್ಲಿ ಟೀಚರ್‌ಗಳ ಹುದ್ದೆಗಳು ಖಾಲಿ ಇವೆಯೋ ಅವುಗಳನ್ನು ತುಂಬಲಿಕ್ಕೆ ಈಗಾಗಲೇ ಸಂಬಂಧಪಟ್ಟ ಇಲಾಖೆಗೆ ತಿಳಿಸಲಾಗಿದೆ. ಆದಷ್ಟು ಬೇಗ ಟೀಚರ್‌ಗಳ ಹುದ್ದೆಗಳನ್ನು ತುಂಬಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಹಿಂದೆ ಪ್ರಾಥಮಿಕ ಶಾಲೆಯ ಶಿಕ್ಷಕರುಗಳನ್ನು ನೇಮಕ ಮಾಡುವುದಕ್ಕೆ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ನೇಮಕಾತಿ ಕಮಿಟಿಯನ್ನು ಮಾಡಿದ್ದೆವು. ಈಗ ಆ ಅಧಿಕಾರ ಜಿಲ್ಲಾಪರಿಷತ್ತಿಗೆ ಹೋಗಿದೆ. ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಲಾಗಿದೆ. ಶಿಕ್ಷಕರುಗಳ ಹುದ್ದೆಗಳು ಖಾಲಿ ಆಗುತ್ತಾ ಬಂದ ಹಾಗೆ ಅವರು ಪುನರ್ ನೇಮಕ ಮಾಡುತ್ತಾರೆ.

ಅಧ್ಯಕ್ಷರು.—ಮೊಯಿಲಿಯವರೇ, ತಾವು ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಯವರು ಉಪಾಧ್ಯಾಯರುಗಳ ಸ್ಕೇಲರಿ ಬಗ್ಗೆ ಮಾತನಾಡುತ್ತಾ ಎಲ್ಲರಿಗೂ ಸ್ಕೇಲರಿಗಳನ್ನು ಕೊಡಲಾಗಿದೆಯೆಂದು ಹೇಳಿದ್ದಾರೆ. ಏಡೆಡ್ ಸ್ಕೂಲುಗಳಲ್ಲಿ ಹೋದ ತಿಂಗಳ ಸಂಬಳವನ್ನು ಇವತ್ತಿನವರೆಗೂ ಕೊಟ್ಟಿಲ್ಲ. ಏಡೆಡ್ ಜೂನಿಯರ್ ಕಾಲೇಜುಗಳಲ್ಲೂ ಸಹ ಸ್ಕೇಲರಿ ರಿಲೀಸ್ ಆಗಿಲ್ಲ. ಒಂದೆರಡು ತಿಂಗಳಿಂದ ಸಹ ಉಪಾಧ್ಯಾಯರುಗಳಿಗೆ ಸಂಬಳಗಳು ಬರುತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಶಿಕ್ಷಣ ಸಂಸ್ಥೆಗಳಲ್ಲಿ ಇದುವರೆಗೆ ಸಂಬಳ ಆಗಿಲ್ಲವೆಂದು ದಯವಿಟ್ಟು ಆ ಶಿಕ್ಷಣ ಸಂಸ್ಥೆಗಳ ಹೆಸರುಗಳನ್ನು ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸೌತ್ ಕೆನರಾದಲ್ಲಿರುವ ಏಡೆಡ್ ಸ್ಕೂಲು ಮತ್ತು ಜೂನಿಯರ್ ಕಾಲೇಜುಗಳಲ್ಲಿ ಯಾರಿಗೂ ಸಂಬಳ ಬಂದಿಲ್ಲ. ಅನೇಕ ಸಂಸ್ಥೆಗಳಲ್ಲಿ ಸಂಬಳಗಳು ಆಗಿಲ್ಲ. ಇದುವರೆಗೂ ಕೊಟ್ಟಿರಲಿಲ್ಲ. ಕೊಟ್ಟಿದ್ದರೆ ಮೊನ್ನೆ ಶನಿವಾರ ಕೊಟ್ಟಿರಬೇಕಷ್ಟೇ. ನಮ್ಮ ಜಿಲ್ಲೆಯಲ್ಲಿ ಆಗಿರುವ ಹಾಗೆ ಬೇರೆ ಜಿಲ್ಲೆಗಳಲ್ಲಿರುವ ಶಿಕ್ಷಣ ಸಂಸ್ಥೆಗಳಲ್ಲೂ ಸಂಬಳ ಆಗಿರಲಿಕ್ಕಿಲ್ಲವೆಂದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ಜಿಲ್ಲೆಯವರೇ ಆದ ಶ್ರೀ ವಸಂತ ಬಂಗೇರಾ ಅವರು ಸಂಬಳಗಳು ರಿಲೀಸ್ ಆಗಿದೆಯೆಂದು ಹೇಳಿದ್ದಾರಲ್ಲಾ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕಾರ್ಕಳದಲ್ಲಿನ ಎಸ್.ವಿ.ಟಿ. ಜೂನಿಯರ್ ಕಾಲೇಜಿಗೆ ಇನ್ನೂ ಸಂಬಳ ರಿಲೀಸ್ ಆಗಲಿಲ್ಲ. ಇಲ್ಲಿ ಆ ಬಗ್ಗೆ ಹೆಚ್ಚು ಚರ್ಚೆ ಬೇಡ, ದಯವಿಟ್ಟು ಜಾಗ್ರತೆ ರಿಲೀಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಒಂದು ವೇಳೆ ಯಾವುದೇ ಸ್ಥಳಗಳಿಗೆ ರಿಲೀಸ್ ಆಗದಿದ್ದಲ್ಲಿ ಅಂತಹ ಸ್ಥಳಗಳಿಗೆ ರಿಲೀಸ್ ಮಾಡಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ನಾವು ಇಲ್ಲಿ ಕೆಲವು ವಿಷಯಗಳ ಬಗ್ಗೆ ನಾವು ಸರಿಯಾಗಿ ತಿಳಿದುಕೊಳ್ಳದೆ ಮಾತನಾಡುತ್ತೇವೆ ಎಂಬ ಅಭಿಪ್ರಾಯ ಬರಬಾರದು. ನೀವು ಇಲ್ಲಿ ರಿಲೀಸ್ ಮಾಡಿದ್ದೇವೆ ಎಂದು ಹೇಳುತ್ತೀರಿ. ಆದರೆ ಅದು ಕೆಲವು ಕಡೆಗಳಿಗೆ ಸರಿಯಾಗಿ ಸೂಕ್ತ ಕಾಲದಲ್ಲಿ ತಲುಪುವುದಿಲ್ಲ. ೧೯೮೫-೮೬ ರಿಂದ ಇವತ್ತಿನವರೆಗೂ ಕೂಡ ಪ್ರೈವೇಟ್ ಏಡೆಡ್

ಇನ್ಸ್‌ಟಿಟ್ಯೂಶನ್ಸ್ ಏನಿವೆ. ಆವುಗಳು ಹೈಸ್ಕೂಲ್ಸ್ ಇರಬಹುದು, ಜೂನಿಯರ್ ಕಾಲೇಜ್‌ಗಳು ಇರಬಹುದು, ಆವುಗಳಿಗೆ ಇಲ್ಲಿರುತನಕ ಯಾವುದೇ ಹೊಸ ಪೋಸ್ಟ್‌ಗಳನ್ನು ಸ್ಯಾಂಕ್ಷನ್ ಮಾಡಿರಲಿಲ್ಲ. ಅಂತಹ ಶಾಲಾಕಾಲೇಜುಗಳಲ್ಲಿ ಸಾಕಷ್ಟು ಅಭಿವೃದ್ಧಿಯಾಗಿರುತ್ತದೆ, ಮಕ್ಕಳು ಕೂಡ ಜಾಸ್ತಿ ಸಂಖ್ಯೆಯಲ್ಲಿ ಬರುತ್ತಿರುತ್ತಾರೆ. ಅಂತಹ ಸಂದರ್ಭಗಳಲ್ಲಿ ನೀವು ಪೋಸ್ಟ್ ಸ್ಯಾಂಕ್ಷನ್ ಮಾಡಲಿಲ್ಲ ಅಂದರೆ ಅವರಿಗೆ ತೊಂದರೆಯಾಗುವುದಿಲ್ಲವೇ ? ಸರಕಾರಿ ಶಾಲಾ ಕಾಲೇಜುಗಳಲ್ಲಿ ಕೂಡ ಕೆಲವು ಹಳೆಯ ಪೋಸ್ಟ್‌ಗಳನ್ನು ತುಂಬಿಲ್ಲ. ಹೊಸದಾಗಿ ಯಾವುದನ್ನೂ ಕೂಡ ಸ್ಯಾಂಕ್ಷನ್ ಮಾಡಿಲ್ಲ. ಇವೊತ್ತು ತಾವುಗಳು ಇಲ್ಲಿ ಹಣವನ್ನು ಸ್ಯಾಂಕ್ಷನ್ ಮಾಡಿಕೊಂಡು ಖರ್ಚು ಯಾವ ರೀತಿಯಲ್ಲಿ ಮಾಡುತ್ತೀರಿ ಎನ್ನುವುದು ಬೇಕು. ಹಣವನ್ನು ಇಲ್ಲಿಂದ ಸ್ಯಾಂಕ್ಷನ್ ಮಾಡಿ ತೆಗೆದುಕೊಂಡು ಹೋದರೆ ಮಾತ್ರ ಸಾಲದು.....

ಶ್ರೀ ಎ. ಲಕ್ಷ್ಮೀಸಾಗರ.—ಮಾನ್ಯ ಮೊಯಿಲಿಯವರು ವಿತ್ತಮಂತ್ರಿಗಳಾಗಿದ್ದಾಗ ಹಣವನ್ನು ಎಲ್ಲಿಗೆ ತೆಗೆದುಕೊಂಡು ಹೋಗಿದ್ದರು ?

SRI M. VEERAPPA MOILY.—I am telling you to pay at least the legitimate salary. You have not been properly informed. ಇನ್ನು ಕಾಫಿ ಬೋರ್ಡ್ ವಿಚಾರವನ್ನು ಹೇಳಿದ್ದೀರಿ. ರಾಜ್ಯ ಸರಕಾರದವರಿಗೆ ಬರುವಂಥ ಹಣವನ್ನು ಕಾಫಿಬೋರ್ಡ್‌ನವರು ಕೊಡಬೇಕು. ಆ ಬಗ್ಗೆ ನಮ್ಮ ಸಹಾಯದಲ್ಲಿಯೇ we were pursuing with the litigation. Ultimately it will again go back to the growers. ಇದನ್ನು ಅವರು ಕೇಂದ್ರ ಸರಕಾರದ ಖಜಾನೆಯಿಂದ ಕೊಡುವುದಿಲ್ಲ. ಆದರೆ ಈ ಹಣದ ಸಂದಾಯದ ಬಗ್ಗೆ ಕೇಂದ್ರ ಸರಕಾರದವರು ತಡೆಹಿಡಿದಿದ್ದಾರೆ ಎಂಬ ಅಭಿಪ್ರಾಯವನ್ನು ಕೊಡುತ್ತೀರಿ, ಅದು ಸರಿಯಲ್ಲ. Coffee Board is an autonomous body. It is as between the State Government and the Coffee Board. Rs. 370 crores is only the foreign exchange which is earned by the Coffee Board and not the excess which is collected by the Government of India.

SRI RAMAKRISHNA HEGDE.—He is right. I stand corrected. It is including the foreign exchange grant.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಇಲ್ಲಿ ಇಂಡಸ್ಟ್ರೀ ಡಿಪಾರ್ಟ್‌ಮೆಂಟ್‌ನ ವಿಚಾರ ಬಂದಾಗಲೂ ಕೂಡ ಪ್ರಸ್ತಾಪ ಮಾಡಿದ್ದೆ. ಸ್ಟೇಟ್ ಮತ್ತು ಸೆಂಟ್ರಲ್ ಸಬ್ಸಿಡಿ ರಿಲೀಸ್ ಮತ್ತು ಡೆವೆಲಪ್‌ಮೆಂಟ್ ಲೋನ್‌ಗಳು ಅನೇಕ ವರ್ಷಗಳಿಂದ ಬಾಕಿ ಇವೆ. ಅವನ್ನು ಬಿಡುಗಡೆ ಮಾಡಿಲ್ಲ. ಕಾಫಿಬೋರ್ಡ್ ವಿಚಾರದಲ್ಲಿ ಹೇಳಿದ್ದೀರಿ. ಲಿಟಿಗೇಷನ್ ೮೫ ಕೋಟಿ ರೂ.ಗಳು ಆಗಿದ್ದರೂ ಕೂಡ ಅದನ್ನು ಬಿಡುಗಡೆ ಮಾಡಿಲ್ಲ ಎಂದು ಹೇಳಿದ್ದೀರಿ. State Government has failed in the High Court. ಸುಪ್ರೀಂ ಕೋರ್ಟ್‌ನಲ್ಲಿಯೂ ಕೂಡ ಫೆಯಿಲ್ ಆಗಿದೆ. The State Government will have to pay to the small SSI units. ಏಕೆಂದರೆ ಇದರಿಂದಾಗಿ ಸ್ಮಾಲ್ ಇಂಡಸ್ಟ್ರಿಗಳು ಡೆವೆಲಪ್ ಆಗುವುದಿಲ್ಲ. ತಾವುಗಳು ಇದರಲ್ಲಿ ಸ್ವಲ್ಪ ಹೆಚ್ಚಿಗೆ ಆಸಕ್ತಿ ತೆಗೆದುಕೊಳ್ಳದಿದ್ದರೆ ಖಂಡಿತಾ ಡೆವಲಪ್ ಆಗುವುದಿಲ್ಲ. ಇದರ ಬಗ್ಗೆ ಕೂಡ ತಾವು ವಿಚಾರ ಮಾಡಬೇಕು. You have not made provision for that.

SRI R.V. DESHPANDE.—Most of that will be adjusted because the Government order says that it should not be refunded. Subsequently they should adjust it. So, it was adjusted. So, liability will not be much. That is the scheme.

ಶ್ರೀ ರಾಮಕೃಷ್ಣ ಹೆಗಡೆ.—ಹೊಸ ಉದ್ಯೋಗವನ್ನು ಸ್ಥಾಪನೆ ಮಾಡುವುದರಲ್ಲಿ ಸಬ್ಸಿಡಿ ಮತ್ತು ಲೋನ್ ಬಾಕಿ ಇದ್ದುದು ನಿಜ. ಆ ಬಗ್ಗೆ ಹಿಂದಿನ ಸರಕಾರದವರು ಒಂದು ಲಿಬರಲ್ ಪಾಲಿಸಿಯನ್ನು ಮಾಡಿ ಬಹಳ ದೊಡ್ಡ ಕಮಿಟ್‌ಮೆಂಟ್ ಮಾಡಿದರು. ಅದು ಸುಮಾರು ೬೦-೭೦ ಕೋಟಿ ರೂ.ಗಳಷ್ಟು ಆಗಬಹುದು. ನಾವು ಕಳೆದ ಮೂರು-ನಾಲ್ಕು ವರ್ಷಗಳಿಂದ ಅದನ್ನು ಕೊಟ್ಟುಕೊಂಡು

ಬರುತ್ತಾ ಇದ್ದೇವೆ. ಈಗಲೂ ಕೂಡ ನನ್ನ ನೆನಪಿನ ಆಧಾರದ ಮೇಲೆ ಹೇಳುತ್ತೇನೆ. ಸುಮಾರು ೧೮-೨೦ ಕೋಟಿ ರೂ.ಗಳಷ್ಟು ಬಾಕಿ ಇದೆ. ಅದನ್ನು ನಾವು ಕೊಡುತ್ತಾ ಇದ್ದೇವೆ. ಕೆಲವು ಇಂಡಸ್ಟ್ರೀಗಳವರಿಗೆ ನೀವು ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಳ್ಳಿ. ನಾವು ಗ್ಯಾರಂಟಿ ಕೊಡುತ್ತೇವೆ

11-00 ಎ.ಎಂ.

ಎಂದು ನಾವು ಹೇಳಿದ್ದೇವೆ. ಅವರು ಯಾವುದೇ ಸಾಲ ತೆಗೆದುಕೊಂಡರೂ ಸಹ ಅದಕ್ಕೆ ನಾವು ಗ್ಯಾರಂಟಿ ಕೊಡುತ್ತೇವೆ. ಬ್ಯಾಂಕಿನವರು ಇಂಟರೆಸ್ಟ್ ರೇಟ್ ಜಾಸ್ತಿ ಚಾರ್ಜ್ ಮಾಡಿದರೆ ನಾವು ಕಡಿವೆ ಮಾಡುತ್ತೇವೆ. ಇದರ ಉಪಯೋಗವನ್ನು ಅನೇಕ ಉದ್ಯಮಗಳು ಪಡೆದುಕೊಂಡಿವೆ. ಈ ಬಾಬ್ತು ಸರ್ಕಾರ 38 ಕೋಟಿ ಖರ್ಚು ಮಾಡಿದೆ.

ಶ್ರೀ ಕೆ.ಹೆಚ್. ಪಾಟೀಲ್.—ಈ ಸದನದ ನಾಯಕರಾದ ಹೆಗಡೆಯವರು ಅಪ್ರೋಪ್ರಿಯೇಷನ್ ಬಿಲ್ ಮೇಲೆ ಉತ್ತರ ಕೊಡುವಾಗ ಬಜೆಟ್ ಮೇಲೆ ನಡೆದ ಇತರ ವಿಷಯಗಳ ಮೇಲೂ ಉತ್ತರ ಕೊಡುವುದೆಂದು ನಾನು ಆಶಯ ಮಾಡಿದ್ದೆ. ಆದರೆ ಈಗ ನಿರಾಶೆಯಾಗಿದೆ. ಅವರು ಹೇಳಿದಂತೆ ಎಲ್ಲಿ ಸರ್ಕಾರ ಒಳ್ಳೆಯ ಕೆಲಸ ಮಾಡಿದೆಯೋ ಅದರ ಬಗ್ಗೆ ಈ ಮನೆಯ ಸದಸ್ಯರು ಕಾಂಪ್ಲಿಮೆಂಟ್ ಮಾಡಬೇಕೆಂಬುದು ನಿಜ. ಶಹಭಾಷ್‌ಗಿರಿ ಕೊಡದೆ ಗತ್ಯಂತರವಿಲ್ಲ. ರಾಜ್ಯದ ಹಣಕಾಸಿನ ಮತ್ತು ಇತರೆ ಸಂಗತಿಗಳು ಇಷ್ಟೊಂದು ಅಸಮಾಧಾನಕರವಾಗಿದ್ದರೂ ಇಲ್ಲೀತನಕ ನಗುಮೊಗರಾಗಿ ಅಸೆಂಬ್ಲಿಯನ್ನು ಫೇಸ್ ಮಾಡಿಕೊಂಡು ಅವರು ಈಗ ಅಪ್ರೋಪ್ರಿಯೇಷನ್ ಬಿಲ್ ತಂದಿದ್ದಾರೆ. ಅದಕ್ಕೆ ಅವರಿಗೆ ನಮ್ಮ ಕಾಂಪ್ಲಿಮೆಂಟ್ಸ್. ನಮಗೂ ಅವರು ಒಂದು ಕಾಂಪ್ಲಿಮೆಂಟ್ಸ್ ಕೊಡಬೇಕು. ಏಕೆಂದರೆ ಕಾಂಗ್ರೆಸ್‌ನವರು ನಮ್ಮಲ್ಲಿರುವ ಬಿರುಕಿನ ದುರುಪಯೋಗ ಪಡೆದು ಸರ್ಕಾರಕ್ಕೆ ಅಪಾಯ ತರುತ್ತಾರೋ ಎಂದಿದ್ದರು. ಆದರೆ ನಾವು 66 ಜನ ಇದ್ದರೂ ಒಳ್ಳೆಯದನ್ನು ವಿರೋಧ ಮಾಡಲಿಲ್ಲ. ರಚನಾತ್ಮಕವಾದ ವಿಮರ್ಶೆ, ಸಲಹೆ ಮಾಡಿದೆವು. ದುರುದ್ದೇಶದಿಂದ ಸರ್ಕಾರವನ್ನು ಕಿತ್ತುಹಾಕುವುದಕ್ಕೆ ಹೋಗಲಿಲ್ಲ. ನಾವು ಎಷ್ಟು ಸಹಕಾರ ಕೊಟ್ಟಿದ್ದೇವೆ ಎಂಬುದನ್ನು ನೀವು ನಂಬಬೇಕು, ಪೇಪರ್‌ನಲ್ಲಿ ಬರೋದನ್ನೆಲ್ಲಾ ನೀವು ನಂಬಬೇಡಿ. ನಿಮ್ಮ ಫೈನಾನ್ಸ್ ಇಲಾಖೆಯ ಅಧಿಕಾರಿಗಳನ್ನು ದಯವಿಟ್ಟು ನಂಬಬೇಡಿ. ನಿಮಗೆ ಅವರು ವಿವರಗಳನ್ನು ಸರಿಯಾಗಿ ತಿಳಿಸಿಲ್ಲ. ಇಲ್ಲಿ ನಾನು ಹೆಸರು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನನ್ನ ಮಾತನ್ನು ನಂಬಿ. ನಿಮ್ಮ ಫೈನಾನ್ಸ್ ಇಲಾಖೆ ಇವತ್ತು ಯಾವ ದುರವಸ್ಥೆಗೆ ತಲುಪಿದೆ ಎಂದರೆ ಯಾವ ಮಿನಿಸ್ಟ್ರಿ ಸಹ ತಮಗೆ ಸರಿ ಎನಿಸಿದ ಸ್ಕೀಮನ್ನು ಇಂಪ್ಲಿಮೆಂಟ್ ಮಾಡಲು ಆಗುತ್ತಿಲ್ಲ. ಒಂದೇ ಉದಾಹರಣೆ ಹೇಳುತ್ತೇನೆ. ಒಂದು ಸಹಕಾರ ಸಂಘ. ಅವರು ರೀಸನಬಲ್ಲಾದ ವಿಷಯದ ಮೇಲೆ 56 ಲಕ್ಷ ರೂ.ಗಳ ಅಸೆಸ್ಮೆನ್ಸ್ ಕೇಳಿದರು. ಅದಕ್ಕೆ ಕೋರ್ಟ್ ಆರ್ಡರ್ ಇದೆ. ವಿವರ ಇಲ್ಲಿ ತಿಳಿದ ಮೇಲೆ ನೀವೂ ಒಪ್ಪುತ್ತೀರಿ. ಆದರೆ ಫೈನಾನ್ಸ್ ಇಲಾಖೆಯವರು ಒಪ್ಪಲಿಲ್ಲ. ಈಗ ಅದು ಸುಪ್ರೀಂ ಕೋರ್ಟಿಗೆ ಹೋಗಿದೆ. ಆದರೆ ನೀವು ಆಡೋ ಮಾತುಗಳನ್ನು ಕೇಳಿದರೆ ಅಧಿಕಾರಿಗಳು ಇನ್ನೂ ಮೇಲೆ ಹೋಗುತ್ತಾರೆ. ಆದ್ದರಿಂದ ಅವರಿಗೆ ಬುದ್ಧಿ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಶ್ರೀ ಪಾಟೀಲರ ಎರಡನೇ ಸಲಹೆಯನ್ನು ನಾನು ಗಂಭೀರವಾಗಿ ತೆಗೆದುಕೊಂಡು ಪರಿಶೀಲನೆ ಮಾಡುತ್ತೇನೆ. ಅವರ ಮನಸ್ಸಿನಲ್ಲಿ ಆರ್ಥಿಕ ಇಲಾಖೆಯ ಉಚ್ಚ ಅಧಿಕಾರಿಗಳ ಮೇಲೆ ಅಸಮಾಧಾನ ಇದೆ. ಅದನ್ನು ಆದಷ್ಟು ಬೇಗ ಹೋಗಲಾಡಿಸುತ್ತೇನೆ. ಅವರು ನಗುಮೊಗದಿಂದ ನಾನು ಅಸೆಂಬ್ಲಿಯನ್ನು ಫೇಸ್ ಮಾಡಿದ್ದಕ್ಕೆ ಕಾಂಪ್ಲಿಮೆಂಟ್ ಕೊಟ್ಟರು. ಇದನ್ನು ಕೇಳಿದಾಗ ನನಗೆ ಒಂದು ನಾಣ್ಣುಡಿ ನೆನಪಿಗೆ ಬರುತ್ತದೆ. ಅದೇನೆಂದರೆ ನೀವು ನಕ್ಕರೆ ನಿಮ್ಮ ಪ್ರಪಂಚವೇ ನಗುತ್ತದೆ, ನೀವು ಅತ್ತರೆ ನೀವೊಬ್ಬರೇ ಅಳಬೇಕಾಗುತ್ತದೆ ಎಂದು. ನಮಗೂ ಕಾಂಪ್ಲಿಮೆಂಟ್ ಕೊಡಿ ಎಂದು ಅವರು ಹೇಳಿದರು ಅಪ್ರೋಪ್ರಿಯೇಷನ್ ಬಿಲ್ ಬಗ್ಗೆ ನಾವು ಏನೋ ಡಿಫೀಟ್ ಮಾಡಬಹುದು ಹಾಗೆ ಎಂದು ತಿಳಿದುಕೊಂಡಿದ್ದೆವು. ಆದರೆ ಆ ರೀತಿ ಆಗಲಿಲ್ಲ. ಅದಕ್ಕೋಸ್ಕರ ನಮಗೆ ಕಾಂಪ್ಲಿಮೆಂಟ್ ಕೊಡಬೇಕು ಎಂದು ಕೇಳುತ್ತಿದ್ದಾರೆ. ಕಾಂಪ್ಲಿಮೆಂಟ್ಸ್ ಅನ್ನು ಧಾರಾಳವಾಗಿ ಕೊಡುತ್ತೇನೆ. ಆಕಸ್ಮಾತ್ತಾಗಿ ಅದು ಸಾಧ್ಯವಾಗದೇ ಇದ್ದರೂ ನಾನು ಕಾಂಪ್ಲಿಮೆಂಟ್ ಕೊಡುತ್ತೇನೆ. ಅದಕ್ಕಿಂತಲೂ ಹೆಚ್ಚು ಕಾಂಪ್ಲಿಮೆಂಟ್, ಅಭಿನಂದನೆಯನ್ನು ನನ್ನ ಪಕ್ಷದ ನಮ್ಮ ಶಾಸಕರಿಗೆ ನಾನು ಕೊಡಬೇಕು. ಏಕೆಂದರೆ ಅವರು ಒಗ್ಗಟ್ಟನ್ನು ಇಟ್ಟುಕೊಂಡು ಬಂದದ್ದಕ್ಕಾಗಿ ಕೊಡಬೇಕು.

ಶ್ರೀ ಎಂ.ಎಸ್. ಪಾಟೀಲ್.—ತಮ್ಮ ಪಕ್ಷದ ಶಾಸಕರಿಗೆ ಮಾತ್ರ ಊಟ ಕೊಟ್ಟಿದ್ದೀರಿ ನಮಗೆ ಕೊಟ್ಟಿಲ್ಲ.

ಪ್ರೊ॥ ಎ. ಲಕ್ಷ್ಮೀಸಾಗರ್.—ನಾವು ಸಹ ಸಂತುಷ್ಟರು. ಸಂಸ್ಕೃತದಲ್ಲಿ ಒಂದು ಶ್ಲೋಕ ಇದೆ:

"ಸದಾ ಸಂತುಷ್ಟ ಚಿತ್ತಾನಾಂ ಸಂಪದಸ್ಸುಪದೆಪದೆ
ಸದಾ ಮಲಿನ ಚಿತ್ತಾನಾಂ ಸುಖಂ ಸ್ವಪ್ನೇಪಿ ದುರ್ಲಭಂ" ಎಂದು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಿಮ್ಮ ಬೆನ್ನನ್ನು ನೀವೇ ತಟ್ಟಿಕೊಳ್ಳುತ್ತಿದ್ದೀರಿ.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಆಪ್ರೋಪ್ರಿಯೇಷನ್ ಬಿಲ್ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಈ ಸಲ ಯಾವ ವಿಷಯದ ಬಗ್ಗೆಯೂ ಹೆಚ್ಚು ಮಾತನಾಡಲಿಲ್ಲ. ಅದು ತಮಗೂ ಗೊತ್ತಿದೆ. ನಾನು 2-3 ಅಂಶಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಕೆ.ಹೆಚ್. ಪಾಟೀಲ್‌ರವರು ಹೇಳಿದ ಹಾಗೆ ಕೆಲವು ದಿವಸಗಳ ಹಿಂದೆ ನಾನು ಸಭೆಗೆ ಬಂದಾಗ ಏನೇನು ಆಗುತ್ತದೆಯೋ ಎಂದು ನನಗೆ ಅನುಮಾನ ಬಂತು. ನಾನು ಬಂದು ಪತ್ರಿಕೆಯನ್ನು ಓದಿದ ಮೇಲೆ ಜನತಾ ಪಕ್ಷದ ಶಾಸಕರಲ್ಲಿ, ಮಂತ್ರಿಗಳಲ್ಲಿ. ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಶ್ರೀ ದೇವೇಗೌಡ ಮತ್ತಿತರರ ಮಧ್ಯೆ ವಿಷಯ ಭೇದಗಳು ಆಗಿದೆ ಎಂಬ ಬಗ್ಗೆ ಗೊತ್ತಾಯಿತು. ಅದನ್ನು ಓದಿ ನನಗಂತೂ ನಿಜವಾಗಲೂ ಆಶ್ಚರ್ಯವಾಯಿತು. ಇನ್ನೊಂದು ಕಡೆ ದುಃಖ ಸಹ ಆಯಿತು. ಜನತಾ ಪಕ್ಷದವರು ಜನತೆ ಕೊಟ್ಟರುವಂತಹ ಅಪಕಾಶವನ್ನು ಉಳಿಸಿಕೊಳ್ಳುತ್ತಾರೆಯೋ ಇಲ್ಲವೋ ಎನ್ನುವಂತಹ ಪರಿಸ್ಥಿತಿಗೆ ಬಂದಿದೆ ಎಂದು ದುಃಖವಾಯಿತು. ಈಗ ಕೂಡ ಆ ಅನುಮಾನ ಪೂರ್ತಿಯಾಗಿ ನಿವಾರಣೆಯಾಗಿಲ್ಲ. ಆ ಭಿನ್ನಾಭಿಪ್ರಾಯವನ್ನು ನಿವಾರಿಸಿಕೊಳ್ಳುವುದು ನಮಗೇ ಬಿಟ್ಟದ್ದು, ನಾನು ಅದರಲ್ಲಿ ಕೈಹಾಕುವುದಿಲ್ಲ. ಇವತ್ತು ಆಪ್ರೋಪ್ರಿಯೇಷನ್ ಬಿಲ್ ಪಾಸಾಗುತ್ತದೆ, ಬಹಳ ಸಂತೋಷ. ಅವರೂ ಸಹ ಒಪ್ಪಿಕೊಂಡಿದ್ದಾರೆ, ಇದಕ್ಕೆ ಅಡ್ಡಿ ಬರುವುದಿಲ್ಲ ಪಾಸ್ ಮಾಡಿ ಕೊಡುತ್ತೇವೆ ಎಂದು. ಆದರೆ ಒಂದು ಎಚ್ಚರಿಕೆಯನ್ನೂ ಕೂಡ ಕೊಟ್ಟಿದ್ದಾರೆ. ನಾವು ಹೇಳಿದ ಕಂಡೀಷನ್ಸ್‌ಗೆ ಒಪ್ಪಿಕೊಳ್ಳದೇ ಇದ್ದರೆ ಮುತ್ತು ಇವತ್ತು ನೀರಾವರಿ ಯೋಜನೆಗೆ ಏನು ಕೊಡಬೇಕೋ ಆ ಹಣವನ್ನು ಕೊಡದೇ ಇದ್ದರೆ ಅಂದರೆ 200-300 ಕೋಟಿ ರೂಪಾಯಿಗಳನ್ನು ಕೊಡದೇ ಇದ್ದರೆ ಎಂದು ಹೇಳುತ್ತಾ ಇನ್ನೂ 2-3 ಕಂಡೀಷನ್ಸ್‌ಗಳನ್ನು ಹಾಕಿ ಆ ಕಂಡೀಷನ್ಸ್‌ಗಳನ್ನು ಒಪ್ಪದೇ ಹೋದರೆ ನಾವು ಸುಮ್ಮನೆ ಬಿಡುವುದಿಲ್ಲ, don't take us for granted ಎಂದು ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮರು ದಿವಸದ ಪತ್ರಿಕೆಯಲ್ಲಿ ಯಾವುದೇ ಕಂಡೀಷನ್ಸ್ ಹಾಕಿಲ್ಲ ವೆಂದು ಹೇಳತಕ್ಕಂತಹ ಸ್ಪಷ್ಟೀಕರಣ ಬಂದಿದೆ ಅದನ್ನು ತಾವು ಓದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ದೇವೇಗೌಡರ ಕೃಪಾ ಪೋಷಿತ ಮುಖ್ಯಮಂತ್ರಿಗಳಾಗಿಬಿಟ್ಟರು ಎಂದು ನಿಮ್ಮ ಅರ್ಥವೇ?

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಹೆಗಡೆಯವರು ದೇವೇಗೌಡರವರ ಕೃಪಾ ಪೋಷಿತ ಮುಖ್ಯಮಂತ್ರಿಗಳಾಗಿದ್ದಾರೆಂದು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಅದು ನನಗೆ ಗೊತ್ತಿಲ್ಲ. ಹೆಗಡೆಯವರ ಮನಸ್ಸಿನೊಳಗಿನ ಮರ್ಮ ನಿಮಗೆ ಗೊತ್ತಿದೆಯೋ ಏನೋ ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಭಿನ್ನಾಭಿಪ್ರಾಯ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಲ್ಲಿ ಏನು ನಡೆಯುತ್ತಿದೆ ಎಂದು ಹೆಚ್ಚಾಗಿ ತಮಗೆ ಗೊತ್ತಿರುತ್ತದೆ. ನಮಗೆ ಗೊತ್ತಿರುವುದಿಲ್ಲ. ನೀವು ಅವರಿಗೆ ಸಪೋರ್ಟ್ ಮಾಡುತ್ತಿದ್ದೀರಿ.

ಶ್ರೀ ಎಂ.ಎಸ್. ಕೃಷ್ಣನ್.—ನಮಗಿಂತ ಚೆನ್ನಾಗಿ ತಮಗೇ ಗೊತ್ತಿದೆ. ಅವರವರ ಜಗಳ ದೊಳಗೆ ನಾವು ಹೋಗುವುದಿಲ್ಲ. ಕಂಡೀಷನ್ಸ್ ಪ್ರಶ್ನೆ ಇಲ್ಲದ ಹಾಗೆ ಇತ್ಯರ್ಥ ಮಾಡಿಕೊಳ್ಳಿ ಎಂದು ನಾವು ಇಷ್ಟು ಮಾತ್ರ ಹೇಳಬೇಕಾಗಿದೆ. ಜನ ನಿರೀಕ್ಷೆ ಮಾಡಿದ ರೀತಿಯಲ್ಲಿ ಜನತೆಗೆ ಕೊಟ್ಟ ಆಶ್ವಾಸನೆಯನ್ನು ಜಾರಿಗೆ ತೆಗೆದುಕೊಂಡು ಬನ್ನಿ, ಅದನ್ನು ಜಾರಿಗೆ ತರದೇ ಹೋದರೆ ಜನಗಳ ಮಧ್ಯೆ ಅತೃಪ್ತಿ ಜಾಸ್ತಿಯಾಗುತ್ತದೆ. ಯಾವ ಪ್ರಶ್ನೆಗಳು ಇತ್ಯರ್ಥವಾಗುವುದಿಲ್ಲ. ಈ ಸರಕಾರ ಉರುಳುವಿಕೆಗೆ ನೀವೇ ಕಾರಣರಾಗುತ್ತೀರಿ, ಅದು ಆಗದ ಹಾಗೆ ನೋಡಿಕೊಳ್ಳಬೇಕು. ಇವತ್ತು ಅನೇಕ ಫ್ಯಾಕ್ಟರಿಗಳು ಮುಚ್ಚಿಕೊಂಡು ಹೋಗುವ ಪರಿಸ್ಥಿತಿ ಜಾಸ್ತಿಯಾಗುತ್ತಿದೆ. ನಾವು ಕಳೆದ ಬಾರಿ ಆದರ ಹಿಂದಿನ ಬಾರಿ ದಾವಣಗೆರೆ ಮಿಲ್ ವಿಷಯವನ್ನು ಮಾತನಾಡಿದೆವು, ಮೈಸೂರಿನ ಕೃಷ್ಣರಾಜೇಂದ್ರ ಮಿಲ್ ವಿಷಯವನ್ನು ಮಾತನಾಡಿದೆವು. ಫ್ಯಾಕ್ಟರಿಗಳ ಬಗ್ಗೆಯೂ ಕೂಡಾ ಮಾತನಾಡಿದೆವು. ಈಗ ಏನಾಗುತ್ತಿದೆ ಎಂದರೆ ಇನ್ನೂ ಇವುಗಳ ಸಮಸ್ಯೆಗಳು ಜಾಸ್ತಿ

ಯಾಗುತ್ತಿದೆ. ಕೈಗಾರಿಕೆಗಳಲ್ಲಿ ಬಿಕ್ಕಟ್ಟು ಹೆಚ್ಚಾಗುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ ಎನ್ನುವ ಪರಿಸ್ಥಿತಿಯನ್ನು ನಾವು ಇವತ್ತು ನೋಡುತ್ತಿದ್ದೇವೆ. ಈ ಕೈಗಾರಿಗಳಲ್ಲಿ ಬಿಕ್ಕಟ್ಟು ಬಹಳ ಜಾಸ್ತಿಯಾಗುತ್ತಿದೆ ಕೋ-ಆಪರೇಟಿವ್ ಟೆಕ್ಸ್‌ಟೈಲ್ ಮಿಲ್‌ಗಳು ಕೂಡಾ ಮುಚ್ಚಿವೆ. ಬಾಗಲ್‌ಕೋಟ್ ಕೋ-ಆಪರೇಟೀವ್ ಮಿಲ್‌ಗಳು, ಬಿಜಾಪುರ್ ಕೋ-ಆಪರೇಟೀವ್ ಮಿಲ್, ಹಿಂಗೆ ಪ್ರತಿಯೊಂದೂ ಸಹಾ ಇವತ್ತಿನ ದಿವಸ ಬಿಕ್ಕಟ್ಟಿನಲ್ಲಿದೆ. ಇವತ್ತು ಪ್ರೈವೇಟ್ ಫ್ಯಾಕ್ಟರಿಗಳು ಕೂಡಾ ಮುಚ್ಚಿಕೊಂಡಿವೆ, ಚಾಮುಂಡಿ ಪೊಪೆಡ್ಸ್ ಆಲೆಂಬಿಕ್ ಗ್ಲಾಸ್ ಫ್ಯಾಕ್ಟರಿ ಮುಂತಾದುವುಗಳು ಮುಚ್ಚಿಕೊಂಡು ಹೊಗುತ್ತಿವೆ ದಾವಣಗೆರೆಯದು ಇನ್ನೂ ಇತ್ಯರ್ಥವಾಗಿಲ್ಲ ನಿಮ್ಮನ್ನು ಕೇಳಿದರೆ ನಾವು ಕೂಡಾ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳುತ್ತೀರಿ. ಇತ್ಯರ್ಥವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳುತ್ತೀರಿ. ಅವರನ್ನು ಮಾತುಕತೆಗೆ ಕರೆದಿದ್ದೇವೆ ಎಂದು ಹೇಳುತ್ತೀರಿ. ನಿಜ. ಅದನ್ನು ಇಲ್ಲ ಎಂದು ನಾನು ಹೇಳುತ್ತಿಲ್ಲ. ಅವರನ್ನು ಕರೆದು ಮಾತನಾಡುತ್ತೀರಿ ನಿಜ. ಆದರೆ ಒಂದುಸಲ ಅವರನ್ನು ಕರೆಯುತ್ತೀರಿ, ಆದರೆ ಮಾಲೀಕರೇ ಬರುವುದಿಲ್ಲ, ಇವರು ಏನು ಮಾಡಬೇಕು ? ಒಂದು ಸಾರಿ ಕರೆದು ಏನೋ ಮಾತನಾಡುತ್ತೀರಿ, ಮತ್ತೆ ಕಳುಹಿಸಿಕೊಡುತ್ತೀರಿ. ಆದರೆ ವರ್ಷಾಂತ್ಯವಲ್ಲಾ ಸಾವಿರಾರು ಜನ ನಿರುದ್ಯೋಗಿಗಳಾಗಿದ್ದಾರೆ. ಈದಿನ ಅಸೆಂಬ್ಲಿ ಸೆಷನ್ ಮುಗಿದು ಹೋಗುತ್ತದೆ. ಇವರನ್ನು ಕಷ್ಟದಿಂದ ನಿವಾರಣೆ ಮಾಡುವ ಜವಾಬ್ದಾರಿಯೂ ಕೂಡಾ ಸರ್ಕಾರದ ಮೇಲಿದೆ. ಅವರ ಸಫರಿಂಗ್ ಅಂತೂ ತಪ್ಪುವುದಿಲ್ಲ. ಆದ್ದರಿಂದ ಇವರ ಬಗ್ಗೆ ತಕ್ಷಣವೇ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಮುಚ್ಚಿರತಕ್ಕಂಥ ಮಿಲ್‌ಗಳನ್ನು ಫ್ಯಾಕ್ಟರಿಗಳನ್ನು ತೆಗೆಸಬೇಕು ಎಂದು ಹೇಳುತ್ತೇನೆ. ಇವರ ಬಗ್ಗೆ ಯಾವ ರೀತಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಹೆಚ್ಚಿನ ಮಾತುಕತೆಯನ್ನು ಪಹಿಸಬೇಕು. ಇದು ಒಂದು ಪರಿಸ್ಥಿತಿ. ಎರಡನೆಯದಾಗಿ ಒಂದು ವಿಷಯವನ್ನು ಹೇಳಬೇಕು ಎಂದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಬೆಂಗಳೂರಿನ ಬಗ್ಗೆ ಒಳ್ಳೆಯ ಕಾಳಜಿ ಕಳಕಳಿ ಇದೆ. ಇದನ್ನು ಅವರೇ ಯಾವಾಗಲೂ ಹೇಳುತ್ತಿರುತ್ತಾರೆ. ಸ್ವಲ್ಪ ಮುಟ್ಟಿಗೆ ಓಡಾಡುತ್ತಿರುತ್ತಾರೆ. ಅವರ ಕ್ಷೇತ್ರದಲ್ಲಿ ಓಡಾಡಿದ್ದಾರೆ. ಓಡಾಡಿ ಎಲ್ಲಾ ನೋಡಿಕೊಂಡು ಬಂದಿದ್ದಾರೆ. ಆದರೆ ಇತ್ತೀಚೆಗೆ ಮುಖ್ಯಕಾರ್ಯಕ್ರಮಗಳು ತಪ್ಪಿದ್ದಾವೆ, ಇದಕ್ಕೆ ಹಲವಾರು ಕಾರಣಗಳು ಇರಬಹುದು, ತೊಂದರೆಗಳು ಇರಬಹುದು, ಕೆಲಸ ಇರಬಹುದು. ಆದರೆ ಕಾರ್ಪೋರೇಷನ್‌ನಲ್ಲಿ ನಡೆಯುತ್ತಿರುವಂಥ ವ್ಯವಹಾರದ ಬಗ್ಗೆ ತಮಗೆ ಗೊತ್ತಿರಬಹುದು. ಅದರಲ್ಲಿ ಇರುವಷ್ಟು ಒಂದು ಭ್ರಷ್ಟಾಚಾರ ಮತ್ತು ಅನೈತಿಕತೆ ಬೇರೆಲ್ಲೂ ಇಲ್ಲ. ನನಗೆ ಏನು ಆಗುತ್ತದೆ ಎಂದರೆ ತಾವು ಹೆಚ್ಚಿನ ರೀತಿಯಲ್ಲಿ ಬೆಂಗಳೂರಿನ ಶಾಸಕರನ್ನು ಕರೆಸಿ ಇದರ ಬಗ್ಗೆ ಚರ್ಚೆ ಮಾಡಬೇಕು. ಬಿ. ಡಿ. ಎ. ವ್ಯವಹಾರ ಮತ್ತು ಕಾರ್ಪೋರೇಷನ್ ವ್ಯವಹಾರ ಇವೆರಡನ್ನೂ ಚರ್ಚೆಮಾಡಬೇಕು. ಇವುಗಳು ಬಹಳ ಮುಖ್ಯವಾದಂಥ ವಿಷಯ. ಜನಗಳ ಮನಸ್ಸಿನಲ್ಲಿ ಚರ್ಚೆಗೆ ಇರತಕ್ಕಂಥ ವಿಷಯ ಎಂದರೆ ಪ್ಯಾಲೇಸ್ ಜಾಗ. ಬೆಂಗಳೂರು ಪ್ಯಾಲೇಸ್ ಜಾಗದ ಬಗ್ಗೆ. ಹಲವಾರು ರೂಮರ್‌ಗಳು ಬರತ್ತಿವೆ. ಈ ಜಾಗವನ್ನು ಪಾರ್ಕ್ ಆಗಿ ಇಟ್ಟುಕೊಳ್ಳಿ ಈಗಾಗಲೇ ಬೆಂಗಳೂರಿನಲ್ಲಿ ಲಾಲ್‌ಬಾಗ್ ಉದ್ಯಾನವನ ಇರುವಂಥ ರೀತಿಯಲ್ಲಿ ಉತ್ತರಕ್ಕೂ ಒಂದು ಉದ್ಯಾನವನ್ನು ಕೊಡಲಿ ಎಂದು ಜನ ಕೇಳುತ್ತಾರೆ. ಇದನ್ನು ಷಾಪಿಂಗ್ ಕಾಂಪ್ಲೆಕ್ಸ್‌ಗೋ ಅಥವಾ ಎಕ್ಸಿಬಿಷನ್‌ಗೋ ಇನ್ನೊಂದಕ್ಕೋ ಕೊಟ್ಟರೆ ಅಕ್ಷಮ್ಯ ಅಪರಾಧವಾಗುತ್ತದೆ. ತಾವು ಪೊಲ್ಯೂಷನ್ ಬಗ್ಗೆ ಮಾತನಾಡಿದ್ದೀರಿ. ತಾವು ಅಮೇರಿಕಾಕ್ಕೆ ಹೋಗಿ ನೋಡಿಕೊಂಡು ಬಂದಿದ್ದೀರಿ. ನಾನು ಸಹ ಅಮೆರಿಕಾಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಎನ್‌ವಿರಾನ್‌ಮೆಂಟ್ ಬಗ್ಗೆ ಡಾ|| ಜೀವರಾಜ ಆಳ್ವ ಅವರ ಸ್ನೇಹಿತರು ಕೂಡಾ ಡಾಕ್ಟರ್ ನಾನು ಅವರನ್ನು ವಿಸಿಟ್ ಮಾಡಿದ್ದೆ. ಆಳ್ವ ಸ್ನೇಹಿತರು ಹೇಳಿದರು, ಎನ್‌ವಿರಾನ್‌ಮೆಂಟ್ ಪೊಲ್ಯೂಷನ್ ಬಗ್ಗೆ ಅವರದು ಕ್ಯಾಪಿಟಲ್ ಸೊಸೈಟಿ ಆದರೂ ಎನ್‌ವಿರಾನ್‌ಮೆಂಟ್ ಬಗ್ಗೆ ಎಷ್ಟೊಂದು ಕಾಳಜಿಯನ್ನು ಪಹಿಸುತ್ತಾರೆ ಎಂದು ನಾನು ಕಣ್ಣಿಂದ ಕಂಡೆ. ಈ ರೀತಿಯಲ್ಲಿ ಇರಬೇಕಾದರೆ ಆ ಜಾಗವನ್ನು ಯಾರು ಯಾರಿಗೋ ಮಾರಿ ಬೇರೆಯವರಿಗೆ ಕೊಟ್ಟುಬಿಟ್ಟರೆ ಇದು ಸರಿಯಾದುದಲ್ಲ. ಇಲ್ಲಿಯೂ ದೊಡ್ಡದೊಂದು ಲಾಲ್‌ಬಾಗ್ ಉದ್ಯಾನವನವನ್ನು ನಿರ್ಮಾಣ ಮಾಡಬೇಕು ಎಂದು ಹೇಳಿ ಒತ್ತಾಯಮಾಡುತ್ತೇನೆ. ತಾವು ಏನು ಮಾಡಿದ್ದೀರೋ ನನಗೆ ಗೊತ್ತಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಅಲ್ಲಿ ಡಿಸ್ನಿಲ್ಯಾಂಡ್ ಮಾಡಬೇಕು ಎಂದು ನಿರ್ಮಾನವನ್ನು ಮಾಡಿದ್ದರು, ಅದರ ಬಗ್ಗೆ ಏನಾಯಿತು ?

ಅಧ್ಯಕ್ಷರು.—ತಾವು ಕೂಡ್ರಿ, ನಿಮಗೂ ಅವಕಾಶ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮಗೆ ಪಟ್ಟಭದ್ರಹಿತಾಸಕ್ತಿಗಳಿಗೆ ಮಣಿಯುವಂಥ ಪರಿಸ್ಥಿತಿ ಬರಕೂಡದು. ಬೆಂಗಳೂರಿನಲ್ಲಿ ಅನೇಕ ಕಡೆ ಪಟ್ಟಭದ್ರ ಹಿತಾಸಕ್ತಿಗಳು, ಶಾಸಕರು, ಸಾಹುಕಾರರು, ಶ್ರೀಮಂತರು ಸರ್ಕಾರದ ಜಾಗವನ್ನು ತೆಗೆದುಕೊಂಡು ಅನುಕೂಲ ಮಾಡಿಕೊಳ್ಳುವುದಕ್ಕೆ ಪ್ರಯತ್ನವನ್ನು ತೀರ್ವವಾಗಿ ಮಾಡುತ್ತಿದ್ದಾರೆ. ಕೆರೆ ಅಂಗಳಗಳನ್ನು ಹೊಡೆದುಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಶ್ರೀಪಾನ್ ರಾಮಕೃಷ್ಣ ಹೆಗಡೆಯವರ ಜೊತೆಯಲ್ಲಿ ೨-೩ ಸಾರಿ ಹೋಗಿದ್ದೆ, ಚಂದ್ರಶೇಖರ್ ಜೊತೆಯಲ್ಲಿಯೂ ಬಂದಿದ್ದೆ. ನನ್ನ ಏರಿಯಾದ ಸುಬ್ರಹ್ಮಣ್ಯನಗರದಲ್ಲಿ ಯಾವುದೋ ಖಾಸಗಿಯವರಿಗೆ ಕೆರೆ ಅಂಗಳವನ್ನು ಕೊಟ್ಟಿದ್ದಾರೆ. ಈ ಬಗ್ಗೆ ಸ್ಟೇ ಆರ್ಡರ್ ತಂದಿದ್ದಾರೆ. ಇವರೆಗೆ ಸ್ಟೇ ಆರ್ಡರ್ ತೆಗೆದಿಲ್ಲ, ಅದು ಹಾಗೆಯೇ ಉಳಿದಿದೆ. ಹೇಳಿ ಹೇಳಿ ಸಾಕಾಗಿದೆ, ಸುಮಾರು ಮೂರು ವರ್ಷದಿಂದ ಈ ತರಹ ಬೆಂಗಳೂರು ನಗರದಲ್ಲಿ ಸಮಸ್ಯೆಗಳು ಇವೆ, ಇದರ ಕಡೆಗೆ ಹೆಚ್ಚಿಗೆ ಗಮನ ಹರಿಸಬೇಕು. ಮೂರನೆಯದಾಗಿ ಪೋಲೀಸರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ನಮ್ಮ ಏರಿಯಾದಲ್ಲಿ ಇತರಕಡೆಗಳಲ್ಲಿ ಅವರು ಭಾನುವಾರವೂ ಕೆಲಸ ಮಾಡುತ್ತಿದ್ದಾರೆ. ಅವರಿಗೆ ೭ ರೂಪಾಯಿ ಮಾತ್ರ ಭತ್ಯ ಕೊಡುತ್ತಿದ್ದಾರೆ. ಬೇರೆಯವರಿಗೆ ಜಾಸ್ತಿ ಕೊಡುತ್ತಿದ್ದೀರಿ, ಪೋಲೀಸಿನವರಿಗೆ ಬೇರೆಯವರಿಗಿಂತ ಕಡಿಮೆ ಕೊಡುತ್ತಿದ್ದೀರಿ. ಆದ್ದರಿಂದ ಇದನ್ನು ಎಕ್ಸಾಮಿನ್ ಮಾಡಿ ತಕ್ಷಣ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಖ್ಯವಾದ ರಿಸೋರ್ಸ್ ವಿಷಯದ ಬಗ್ಗೆ ಮಾತನಾಡುವುದಕ್ಕೆ ಹೊಗುವುದಿಲ್ಲ. ಇಷ್ಟು ಮಾತ್ರ ಅಪ್ರೊಪ್ರಿಯೇಷನ್ ಬಿಲ್ ಬಗ್ಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣನ್‌ರವರು ನಮ್ಮ ಪಕ್ಷದ ಅಂದರೆ ಜನತಾ ಪಕ್ಷದ ಬಗ್ಗೆ ತಮ್ಮ ಚಿಂತನೆಯನ್ನು ವ್ಯಕ್ತ ಮಾಡಿದ್ದಾರೆ ಮತ್ತು ಸ್ನೇಹ ಪರವಾದ ಸಲಹೆಯನ್ನು ಕೊಟ್ಟಿದ್ದಾರೆ, ಎರಡನೆಯದಾಗಿ ಕೃತಜ್ಞತೆಯನ್ನು ವ್ಯಕ್ತಮಾಡಿದ್ದಾರೆ. ನಾನು ಒಂದು ಆಶ್ವಾಸನೆಯನ್ನು ಕೊಡಬಹುದು. ಜನರು ಯಾವ ವಿಶ್ವಾಸವನ್ನು ಚುನಾವಣೆ ಸಮಯದಲ್ಲಿ ಜನತಾ ಪಕ್ಷದಲ್ಲಿ ತೋರಿಸಿ ನಮ್ಮನ್ನು ಅಧಿಕಾರಕ್ಕೆ ತಂದರು ಅವರ ಆ ವಿಶ್ವಾಸಕ್ಕೆ ವ್ಯತಿರಿಕ್ತವಾಗಿ ಧಕ್ಕೆ ಬರತಕ್ಕ ರೀತಿಯಲ್ಲಿ ನಮ್ಮ ಪಕ್ಷ ನಡೆದುಕೊಳ್ಳುವುದಿಲ್ಲವೆಂಬ ಆಸೆ ನಮಗೆ ಇದೆ. ಜನತೆಯಲ್ಲಿ ಸಹ ನಮಗೆ ಅಷ್ಟೇ ವಿಶ್ವಾಸ ಇದೆ ಆದ್ದರಿಂದ ಈ ವಿಚಾರದಲ್ಲಿ ನಾನು ಹೆಚ್ಚು ಚಿಂತೆ ಮಾಡತಕ್ಕ ಕಾರಣ ಇಲ್ಲ. ಬರುವ ಚುನಾವಣೆಯಲ್ಲಿ ನಮ್ಮ ಪಕ್ಷ ಗೆಲ್ಲುತ್ತದೆ ಎಂಬ ಆತ್ಮವಿಶ್ವಾಸದಿಂದ ಹೇಳತಕ್ಕ ಅವಕಾಶ ನಮಗೆ ಇದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅದಕ್ಕೆ ಬೇಗ ಚುನಾವಣೆ ಮಾಡಿ ಮುಗಿಸಿ, ಒಂದೇ ಸಲ ಎಲ್ಲಾ ಆಗಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಎಲೆಕ್ಷನ್ ಬಹಳ ಹತ್ತಿರ ಇದೆ ಎಂದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಪ್ರಧಾನ ಮಂತ್ರಿಯವರು ಏನು ಮಾಡುತ್ತಾರೋ ಎಂಬುದನ್ನು ನೋಡಿಕೊಂಡು ಆ ಮೇಲೆ ನಾವು ಯೋಚನೆ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ. -ಪ್ರಧಾನ ಮಂತ್ರಿಗಳ ಮಾವರಿಯಲ್ಲಿ ತಾವೇ ಎಲ್ಲಾ ಕಡೆ ಪ್ರಚಾರ ಮಾಡುತ್ತಿದ್ದೀರಂತೆ, ನಡೆಯಲಿ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ, ಇಲ್ಲ,

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಚುನಾವಣೆ ವಿಷಯ ಪ್ರಸ್ತಾಪ ಮಾಡಿದರು, ಮರು ಚುನಾವಣೆ ನಿಶ್ಚಿತ ಎಂದು ಇದರಿಂದ ವ್ಯಕ್ತವಾಗುತ್ತದೆ. ಆದ್ದರಿಂದ ಅಸೆಂಬ್ಲಿ ಡಿಸಾಲ್ವ್ ಮಾಡುವ ಸಂದರ್ಭ ಏನಾದರೂ ಇದೆಯೇ ಹೇಗೆ?

ಶ್ರೀ ರಾಮಕೃಷ್ಣ ಹೆಗಡೆ.—ಯಾವುದೇ.—ರೀತಿಯಿಂದಲಾದರೂ ಡಿಸ್ಸಾಲ್ ಮಾಡುವ ಸೂಚನೆ ಏನಾದರೂ ಸಿಕ್ಕುತ್ತದೆಯೇ ಎಂದು ಅವರು ಅಷ್ಟೊಂದು ಪ್ರಯತ್ನ ಮಾಡುತ್ತಿದ್ದಾರೆ, ಆ ವಿಚಾರವನ್ನು ಧಯವಿಟ್ಟು ನಿಮ್ಮ ತಲೆಯಿಂದ ತೆಗೆದುಹಾಕಿ ಬಿಡಿ. ಆ ವಿಚಾರ ತಮಗೂ ಬೇಕಾಗಿಲ್ಲ. ಕೆಲವು ಉದ್ದಿಮೆಗಳ ವಿಚಾರದಲ್ಲಿ ಮಾನ್ಯ ಕೃಷ್ಣನ್‌ರವರು ಪ್ರಸ್ತಾಪ ಮಾಡಿದರು. ಅವರು ಹೇಳಿದ ಮಾತುಗಳು ಸತ್ಯ. ಅನೇಕ ಸಹಕಾರಿ ನೂಲಿನ ಗಿರಣಿಗಳು ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿ ಇದ್ದಾವೆ. ನಾವು ಎಷ್ಟೇ ಸಹಾಯ ಮಾಡಿದರೂ ಸಂಬಳ ಕೊಡಲಿಕ್ಕೆ ಪ್ರತಿ ಮೂರು ತಿಂಗಳಿಗೆ ಹಣ ಪೂರೈಸಿದರೂ

ಕೊಟ್ಟಂತಹ ಹಣ ಮುಳುಗೇ ಹೋಗುತ್ತದೆ. ಅಲ್ಲಿಂದ ಏನೂ ರಿಟರ್ನ್ ಬರುತ್ತಿಲ್ಲ. ಅದೇ ರೀತಿ ದಾವಣಗೆರೆಯಲ್ಲಿ ಇರತಕ್ಕ ಮೂರೂ ಮಿಲ್‌ಗಳ ಬಗ್ಗೆ ಮೈಸೂರಿನ ಕೃಷ್ಣರಾಜ ಮಿಲ್ ಬಗ್ಗೆ ಬೇಕಾದಷ್ಟು ಚರ್ಚೆ ಮಾಡಿದ್ದೇವೆ, ಮಾನ್ಯ ಕೃಷ್ಣನ್‌ರವರಿಗೆ ಇದು ಗೊತ್ತುಂಟು, ಮಾನ್ಯ ಪಂಪಾಪತಿಯವರಿಗೆ ಗೊತ್ತುಂಟು. ಬಿಜಾಪುರ ಸ್ಪಿನ್ನಿಂಗ್ ಮಿಲ್ ಬಗ್ಗೆ ಆಗಲೇ ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಗುಲ್ಬರ್ಗಾ ಫ್ಯಾಕ್ಟರಿ ಕ್ಲೋಸ್ ಆಗಿ ಎಷ್ಟು ದಿವಸ ಆಯಿತು.

ಶ್ರೀ ರಾಮಕೃಷ್ಣ ಹೆಗಡೆ.—ಗುಲ್ಬರ್ಗಾದಲ್ಲಿ ಕ್ಲೋಸ್ ಆಯಿತು, ಇಲ್ಲಿ ಮಿನರ್ವ ಮಿಲ್ ಮತ್ತು ಮೈಸೂರು ಮಿಲ್ ಕ್ಲೋಸ್ ಆಗಿದೆ, ಅವರು ಲಾಕ್ ಔಟ್ ಮಾಡಿದ್ದಾರೆ. ಅವು ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೊರೇಷನ್ ಅಧೀನಕ್ಕೆ ಒಳಪಟ್ಟ ಮಿಲ್‌ಗಳು. ಅದರ ಅಧ್ಯಕ್ಷರನ್ನು ನಾನು ನೆಹಲಿಯಲ್ಲಿ ಭೇಟಿ ಮಾಡಿದೆ. ಆಗ ಅವರು ನಾವು ಮಾಡ್ರನೈಸ್ ಮಾಡುತ್ತೇವೆಂದು ಹೇಳಿದರು. ಹೊಸ ಮೆಶಿನರಿಗಳನ್ನು ಹಾಕುತ್ತೇವೆ, ಎರಡನ್ನೂ ಕೂಡಿಸತಕ್ಕ ಯೋಜನೆ ಇದೆ, ಅದಕ್ಕೆ ನಿವೃತ್ತಿ ಕಾರ್ಮಿಕರಿಂದ ಸಹಕಾರವನ್ನು ಕೊಡಿಸಿ ಎಂದು ಕೇಳಿಕೊಂಡರು. ಆಗ ನಾನು ಹೇಳಿದೆ, ಕಾರ್ಮಿಕ ಮಂತ್ರಿಗಳು ಇದ್ದಾರೆ, ಮತ್ತು ಕೈಗಾರಿಕಾ ಮಂತ್ರಿಗಳೂ ಇದ್ದಾರೆ, ಅವರ ಜೊತೆ ಚರ್ಚೆ ಮಾಡಿ, ಅವರನ್ನೂ ಬೇಕಾದರೆ ಕರೆಸುತ್ತೇನೆ ಎಂದು. ನಂತರ ಇಲ್ಲಿ ಬಂದಮೇಲೆ ನನಗೆ ಗೊತ್ತಾಯಿತು. ಏನು ಅಂದರೆ ಈ ರೀತಿ ಮಾಡುವುದರಿಂದ ಸುಮಾರು ಎರಡು ಸಾವಿರ ಕಾರ್ಮಿಕರು ಕೆಲಸವನ್ನು ಕಳೆದುಕೊಳ್ಳುತ್ತಾರೆ ಎಂದು, ಎರಡು ಸಾವಿರ ಕಾರ್ಮಿಕರು ಕೆಲಸವನ್ನು ಕಳೆದುಕೊಳ್ಳತಕ್ಕ ಯಾವುದೇ ಒಂದು ಸೂಚನೆ ಬಂದರೆ ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಮಾಡ್ರನೈಸ್ ಮಾಡಲಿ ಮತ್ತು ಲಾಭದಿಂದ ನಡೆಯತಕ್ಕ ಯಾವುದೇ ವ್ಯವಸ್ಥೆ ಮಾಡಲಿ, ಅದಕ್ಕೆ ನಾವು ಸಂಪೂರ್ಣವಾದ ಸಹಕಾರ ಕೊಡುತ್ತೇವೆ. ಅಲ್ಲಿರತಕ್ಕ ಜಮೀನನ್ನು ಮಾರಾಟ ಮಾಡಬೇಕು ಎಂಬ ಉದ್ದೇಶ ಇದೆ. ಆದರೆ ಜಮೀನನ್ನು ಮಾರಾಟ ಮಾಡಿ ಬಾಕಿಯದನ್ನು ನಷ್ಟ ಮಾಡಿಕೊಂಡು ಹೋಗುವುದೂ ಅಷ್ಟು ಸಮಂಜಸ ಅಲ್ಲ. ಆದ್ದರಿಂದ ಅದಕ್ಕೆ ಒಂದು ಸಂಪೂರ್ಣವಾದಂಥ ರೀಹ್ಯಾಬಿಲಿಟೇಷನ್ ಮತ್ತೊಂದು ಮಗದೊಂದು ವ್ಯವಸ್ಥೆ ಮಾಡಿದರೆ ಮಾತ್ರ ನಾವು ಸಪೋರ್ಟ್ ಮಾಡುತ್ತೇವೆಂದು ಹೇಳಿದ್ದೇವೆ. ಇವೊತ್ತು ಬೆಳಿಗ್ಗೆ ೬ ಗಂಟೆಗೆ ಈ ನಿರಣಿಯ ಕಾರ್ಮಿಕ ಬಂಧುಗಳು ನನ್ನ ಹತ್ತಿರ ಬಂದಿದ್ದರು. ಆಗ ಪರಿಗೆ ನಿಮ್ಮ ಇಂಟರೆಸ್ಟ್ ಕಾಪಾಡುವುದಾಗಿ ಹೇಳಿದೆ. ಇಲ್ಲಿ ಲೇಬರ್ಸ್ ಇಂಟರೆಸ್ಟ್ ಬೇರೆ ಮತ್ತು ದ್ಯಮದ ಇಂಟರೆಸ್ಟ್ ಬೇರೆ ಎಂದು ನಾವು ತಿಳಿದುಕೊಳ್ಳುವುದಿಲ್ಲ. ಈ ಎರಡರ ಇಂಟರೆಸ್ಟ್ ಸಹ ಒ ದೇ ಎಂದು ನಾವು ತಿಳಿದುಕೊಂಡಿದ್ದೇವೆ. ಇದರಲ್ಲಿ ಪ್ರಾಫಿಟ್ ಮೊಟೀವ್ ಇಲ್ಲ. ಆದ್ದರಿಂದ ಇಬ್ಬರನ್ನೂ ಕರೆಸಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ನಾನು ಆ ಕಾರ್ಮಿಕರಿಗೆ ಹೇಳಿದೆ. ಮತ್ತೆ ದಾವಣಗೆರೆ ಮಿಲ್‌ಗಳ ವಿಚಾರ ಮಾನ್ಯ ಪಂಪಾಪತಿ ಅವರಿಗೆ ಗೊತ್ತಿದೆ. ಅದರ ಬಗ್ಗೆ ಮಾತುಕತೆಯಾಡಲು ನಾಳೆ ವಿೂಟಿಂಗ್ ಕರೆದಿದ್ದೇವೆ. ಮತ್ತೆ ಕೃಷ್ಣರಾಜೇಂದ್ರ ಮಿಲ್ ಬಂದ್ ಆಗಿ ೬ ವರ್ಷಗಳ ಮೇಲಾಯಿತು. ಆ ಮಿಲ್‌ನ್ನು ತೆಗಸಲು ನಾವು ಕಳೆದ ನಾಲ್ಕು ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇವೆ. ನಾವು ಏನೇ ಪ್ರಯತ್ನ ಮಾಡಿದರೂ ಸಹ ಇದರ ಮಾಲೀಕರು ನಮ್ಮ ಕೈಗೆ ಸಿಗುತ್ತಿಲ್ಲ. ಕೊನೆಗೆ ಅರೆಸ್ಟ್ ವಾರಂಟ್ ಹೊರಡಿಸಿದ ಮೇಲೆ ಮಾತುಕತೆಗೆ ಬರಲು ಒಪ್ಪಿಕೊಂಡರು. ನಂತರ ಅವರು ಲಿಕ್ವಿಡೇಷನ್‌ಗೆ ಹಾಕುವುದಾಗಿ ಹೇಳಿದರು. ಆ ರೀತಿ ಎನಾದರೂ ಮಾಡಿದರೆ ನಾವು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಹೇಳಿದ ಮೇಲೆ ಅವರು ಅದನ್ನು ಕೈಬಿಟ್ಟು ರೀಹ್ಯಾಬಿಲಿಟೇಷನ್ ಬಗ್ಗೆ ಅರ್ಜಿ ಹಾಕುತ್ತೇವೆಂದು ಹೇಳಿದ್ದಾರೆ. ಒಟ್ಟಿನಲ್ಲಿ ಈ ಬಗ್ಗೆ ಕೊನೆಯದಾಗಿ ಏನು ಮಾಡಬೇಕೋ ಅದನ್ನು ನಾವು ಮಾಡುತ್ತೇವೆ.

ಇನ್ನು ಮಾನ್ಯ ಕೃಷ್ಣನ್ ಅವರು ಹೇಳಿದರು, ಏನೆಂದರೆ, ಮುಖ್ಯಮಂತ್ರಿಗಳಿಗೆ ಬೆಂಗಳೂರಿನ ಬಗ್ಗೆ ವಿಶೇಷ ಆಸಕ್ತಿ ಇದೆ, ಅವರ ಮತಕ್ಷೇತ್ರಕ್ಕೆ ಆಗಾಗ ಹೋಗಿ ಬರುತ್ತಿರುತ್ತಾರೆಂದು. ನಾನು ನನತ ಮತದಾರರ ಕ್ಷೇತ್ರಕ್ಕೆ ಆಗಾಗ ಹೋಗಿ ಬರುತ್ತೇನೆ. ಹಾಗೆ ನೋಡಿದರೆ ಇಡೀ ರಾಜ್ಯವೇ ನನ್ನ ಮಾಡ ದಾರರ ಕ್ಷೇತ್ರ. ನಾನು ಬೆಂಗಳೂರಿನಲ್ಲಿಯೇ ಇದ್ದಾಗ ಮತ್ತು ಬೇರೆ ರೀತಿಯ ಕೆಲಸಗಳ ಒತ್ತಡ ಇಲ್ಲದಿದ್ದಾಗ ನಾನು ಪ್ರತಿ ಶನಿವಾರ ಬೆ ೫ಗ್ಗೆ ೯ ಗಂಟೆಯಿಂದ ಮಧ್ಯಾಹ್ನ ಎರಡೂವರೆ ಗಂಟೆಯವರೆಲ ನನ್ನ ಮತದಾರರ ಕ್ಷೇತ್ರಕ್ಕೆ ಭೇಟಿ ಕೊಡುವ ಪದ್ಧತಿಯನ್ನು ಇಟ್ಟುಕೊಂಡಿದ್ದೇನೆ. ನಾನು ಪ್ರತಿ ಸಲ ಹೋದಾಗಲೂ ಸಹ ಒಂದು ಸ್ಲಮ್‌ಗೆ ಭೇಟಿ ಕೊಡುತ್ತೇನೆ. ನಾನು ಭೇಟಿ ಕೊಟ್ಟಾಗಲೆಲ್ಲಾ ಆ ಜನರನ್ನು ಒಳ್ಳೆಯ ಕಡೆಗೆ ಸ್ಥಳಾಂತರ ಮಾಡಿಸಿದ್ದೇನೆ. ಈ ರೀತಿ ಮಾಡಲು ಅವರ ಪ್ರೀತಿ ಮತ್ತು

ಸಹಕಾರ ಇರಬೇಕು. ಈ ಜನರು ಬೇರೆ ಕಡೆ ವಾಸ ಮಾಡಲು ಏನು ಈಗ ವ್ಯವಸ್ಥೆ ಮಾಡಲಾಗಿದೆಯೋ ಅಲ್ಲಿ ಏನಾದರೂ ತೊಂದರೆಗಳು ಇದ್ದರೆ, ಅದನ್ನು ನಿವಾರಣೆ ಮಾಡಲು ನಾವು ಪ್ರಯತ್ನ ಮಾಡುತ್ತೇವೆ. ಒಟ್ಟಿನಲ್ಲಿ ಅವರು ಮಾಡಿದಂಥ ಸೂಚನೆಗಳನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಕೃಷ್ಣನ್ ಅವರು ಪೋಲೀಸರ ಬಗ್ಗೆ ಹೇಳಿದ್ದ ವಿಚಾರಕ್ಕೆ ತಾವು ಉತ್ತರ ಕೊಡಲಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಆ ಬಗ್ಗೆ ಅವರು ಕೊಟ್ಟ ಸೂಚನೆಯನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಇಂದು ಧನವಿನಿಯೋಗ ವಿಧೇಯಕ ಪಾಸಾದ ಮೇಲೆ ಈ ಸದನದ ಕಾರ್ಯಕಲಾಪಗಳು ಮುಂದಿಯಾಗುತ್ತವೆ. ಆದ್ದರಿಂದ ಒಂದು ಗಂಭೀರ ವಾದಂಥ ವಿಚಾರವನ್ನು ಈಗ ತಮ್ಮ ಮುಂದಿಡುತ್ತಿದ್ದೇನೆ. ನಾನು ಕಳೆದ ೩-೪ ದಿವಸಗಳಿಂದ ನನ್ನ ಮತದಾರರ ಕ್ಷೇತ್ರಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ರೈತರು ಮೊದಲು ಚೆನ್ನಾಗಿ ಮಳೆ ಬಂತು ಎಂದು ಬಿತ್ತನೆ ಮಾಡಿ ಬಹಳ ಆನಂದದಲ್ಲಿದ್ದರು. ಆದರೆ ಮತ್ತೆ ಮಳೆಯಾಗದ ಕಾರಣ ಅವರ ಕಣ್ಣಲ್ಲಿ ಈಗ ಕಣ್ಣೀರು ಬರುತ್ತಿದೆ. ಹಾಕಿದ ಬೀಜ ಹುಟ್ಟುತ್ತಿಲ್ಲ. ಎಲ್ಲವೂ ಸರ್ವನಾಶವಾಗುತ್ತಿದೆ, ಮಾನ್ಯ ಕೃಷಿ ಮಂತ್ರಿಗಳು ಇದನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕು. ಮತ್ತೆ ನಾವು ಬರಗಾಲ ಪರಿಸ್ಥಿತಿಯನ್ನು ಎದುರಿಸಬೇಕಾದ ಪರಿಸ್ಥಿತಿ ಬರುತ್ತದೋ ಏನೋ ಗೊತ್ತಿಲ್ಲ. ಆ ರೀತಿ ಆಗಬಾರದು ಒಳ್ಳೆಯ ದಿವಸಗಳು ಬರಬೇಕು. ಎಲ್ಲೆಲ್ಲಿ ಬಿತ್ತನೆ ಆಗಿಲ್ಲ ಅಲ್ಲಿ ಮರುಬಿತ್ತನೆ ಮಾಡಲು ಸರ್ಕಾರ ದವರು ಸಂಪೂರ್ಣವಾದ ಸಹಕಾರ ನೀಡಬೇಕು.

ಇನ್ನು ರೈತರು ತಮ್ಮ ಸಾಲವನ್ನು ವಾಪಸ್ ಮಾಡಿದರೆ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನಾ ಮಾಡುವುದಾಗಿ ತಾವು ಹೇಳಿದ್ದೀರಿ. ಇದರ ಪ್ರಕಾರ ಕೆಲವರು ತಮ್ಮ ಮನೆಮಠ ಮಾರಿ ಸಾಲವನ್ನು ವಾಪಸ್ ಮಾಡಿದರು. ಆದರೆ ಕಡುಬಡವರಿಗೆ ಅವಧಿಯೊಳಗೇ ಸಾಲ ಮರುಪಾವತಿ ಮಾಡಲು ಸಾಧ್ಯವಾಗಲಿಲ್ಲ. ಈಗ ಅವರೂ ಸಹ ವಾಪಸ್ ಮಾಡಲು ಸಿದ್ಧರಿದ್ದಾರೆ. ಆದ್ದರಿಂದ ಈ ಅವಧಿಯನ್ನು ಇನ್ನೂ ಒಂದು ತಿಂಗಳ ಕಾಲ ವಿಸ್ತರಣೆ ಮಾಡಬೇಕೆಂದು ನಾನು ರೈತರ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಹೆಚ್ಚಿನ ಕಾಲಾವಕಾಶ ಕೊಟ್ಟರೆ ಅವರು ಬದುಕುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ.

ಇನ್ನು ಈ ರಾಜ್ಯದ ಹಣಕಾಸಿನ ಸ್ಥಿತಿ ಯಾವ ರೀತಿ ಇದೆಯೋ ಗೊತ್ತಿಲ್ಲ. ಈ ಬಗ್ಗೆ ಸ್ಪಷ್ಟವಾದ ಚಿತ್ರಣವಾಗಿ ಗೊತ್ತಿಲ್ಲ. ತಾವು ಹಣಕಾಸಿನ ತೊಂದರೆ ಇದೆ ಎಂದು ಹೇಳಿಕೊಂಡು ಅಪೆಕ್ಸ್ ಬ್ಯಾಂಕ್‌ನಿಂದ ಮತ್ತು ಬೇರೆ ಬೇರೆ ಮಾರ್ಜರಾಯಿ ಸಂಸ್ಥೆಗಳಿಂದ ೪೫ ಕೋಟಿ ರೂಪಾಯಿಗಳನ್ನು ಪಡೆದುಕೊಂಡು ಓವರ್‌ಡ್ರಾಫ್ಟ್‌ಗೆ ಆಪ್ಷನ್ ಮಾಡಿದಿರಿ. ಈ ಹಣವನ್ನು ಮೊದಲೇ ಅವರಿಗೆ ಮರು ಪಾವತಿ ಮಾಡಬೇಕು. ಇಲ್ಲದಿದ್ದರೆ ಸಾಲ ಕೊಟ್ಟ ಸಂಸ್ಥೆಗಳ ಅಭಿವೃದ್ಧಿ ಕಾರ್ಯಕ್ಕೆ ತೊಂದರೆ ಆಗುತ್ತದೆ. ಮತ್ತೆ ಪೋಲೀಸ್ ಇಲಾಖೆ ಲಿಡ್ಕರ್ ಸಂಸ್ಥೆಯಿಂದ ಒಂದೂವರೆ ವರ್ಷಗಳ ಹಿಂದೆ ಪರ್ಚೇಸ್ ಮಾಡಿದ ಹೊಗೆಗೆ ಸಂಬಂಧಪಟ್ಟಂತೆ ಇನ್ನೂ ಪೇಮೆಂಟ್ ಮಾಡಿಲ್ಲ. ಆದ್ದರಿಂದ ಇದರ ಕಡೆಗೂ ಸರ್ಕಾರ ಗಮನ ಕೊಡಬೇಕು. ಮುಖ್ಯವಾಗಿ ರೈತರಿಗೆ ಬೀಜ ಒದಗಿಸಬೇಕು ಮತ್ತು ಸಾಲ ಮರುಪಾವತಿ ಮಾಡಲು ಅವಧಿಯನ್ನು ವಿಸ್ತರಣೆ ಮಾಡಬೇಕು. ಸರ್ಕಾರಕ್ಕೆ ಗೌರವ ಬರಬೇಕು ಎಂದಿದ್ದರೆ ದಯವಿಟ್ಟು ಈ ಬಗ್ಗೆ ದಿಟ್ಟ ಹೆಜ್ಜೆಯನ್ನಿಡಬೇಕು. ಈ ನನ್ನ ಎರಡು ಬೇಡಿಕೆಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ನಾನು ಉತ್ತರವನ್ನು ಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೇ ಪ್ರಶ್ನೆ ಎಲ್ಲೆಲ್ಲಿ ಎರಡನೇ ಮಳೆ ಆಗದೇ ಬಿತ್ತಿದ್ದ ಬೀಜ ಸುಟ್ಟು ಹೋಗುವಂಥ ಪರಿಸ್ಥಿತಿ ಇದೆಯೋ ಅದರ ಬಗ್ಗೆ ತಕ್ಷಣ ವ್ಯವಸಾಯ ಖಾತೆಯ ಮತ್ತು ಗ್ರಾಮೀಣ ಅಭಿವೃದ್ಧಿ ಖಾತೆಯ ಎರಡೂ ಖಾತೆಯ ಮಂತ್ರಿಗಳಾದಂಥ ದೇಶಪಾಂಡೆಯವರು ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳಬಯಸುತ್ತೇನೆ. ಪುನಃ ಹಣಕಾಸಿನ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಬಡ್ಡಿ ಕೊಡತಕ್ಕಂಥಾದ್ದನ್ನು ಮನ್ನಾ ಮಾಡತಕ್ಕಂಥಾದ್ದು ಅಲ್ಲ, ಅವಧಿಯನ್ನು ಮುಂದುವರಿಸುವುದಕ್ಕೆ ಸಾಧ್ಯವಿಲ್ಲ ಎಂದು ಬಹಳ ವಿಷಾದದಿಂದ ಹೇಳುತ್ತೇನೆ.

† ಶ್ರೀ ಪಟವಗಾರ ರತ್ನಾಕರ.—ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇಪತ್ತು ಧನ ವಿನಿಯೋಗ ಮಸೂದೆಯನ್ನು ಮಂಡಿಸಿದ್ದಾರೆ. ಜೊತೆಗೆ ಹಲವಾರು ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದು ಏನೆಂದರೆ, ನಮ್ಮ ಮಲೆನಾಡು ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳಷ್ಟು ಇದೆ. ಆ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಒಂದು ತೊಂದರೆ ಏನೆಂದರೆ, ರಾಷ್ಟ್ರೀಯ ನೀರು ಸರಬರಾಜು ಯೋಜನೆ ಮಂಜೂರಾಗಬೇಕಾದರೆ ಒಂದು ಸಾವಿರ ಜನಸಂಖ್ಯೆಯನ್ನು ಕೇಳುತ್ತಾರೆ, ಕಿರು ನೀರು ಸರಬರಾಜು ಯೋಜನೆ ಮಂಜೂರಾಗಬೇಕಾದರೆ ಅದಕ್ಕೆ ೭೫೦ ರಿಂದ ೬೦೦ ಜನಸಂಖ್ಯೆಯನ್ನು ಕೇಳುತ್ತಾರೆ. ಹಾಗಾಗಿ ನಮ್ಮ ಪ್ರದೇಶಗಳಿಗೆ ರಾಷ್ಟ್ರೀಯ ನೀರು ಸರಬರಾಜು ಯೋಜನೆಯೂ ಮಂಜೂರಾಗುವುದಿಲ್ಲ, ಕಿರು ನೀರು ಸರಬರಾಜು ಯೋಜನೆಯೂ ಮಂಜೂರಾಗುವುದಿಲ್ಲ. ಇದರ ಜೊತೆಗೆ ತೆರೆದ ಬಾವಿ ಕೊಡುವುದನ್ನು ನೀವು ನಿಲ್ಲಿಸಿ ಬಿಟ್ಟಿದ್ದೀರಿ. ಬರೀ ಬೋರ್ ವೆಲ್ ಕೊಡುತ್ತಿದ್ದೀರಿ, ಅಲ್ಲಿ ಬೋರ್‌ವೆಲ್‌ಗಳ ಬಗ್ಗೆ ಒಂದು ಅಭಿಪ್ರಾಯ ಎನು ಎಂದರೆ ಅಲ್ಲಿಯ ಭೂಮಿಯ ಕಾರಣಗಳಿಂದಾಗಿ ಬೋರ್‌ವೆಲ್‌ಗಳು ಯಶಸ್ಸು ಗಳಿಸುವುದಿಲ್ಲ ಎನ್ನತಕ್ಕ ಮಾತು ಇದೆ. ಆದುದರಿಂದ ತೆರೆದ ಬಾವಿಗಳನ್ನು ನೀವು ಮಲೆನಾಡು ಪ್ರದೇಶಗಳಿಗೆ ಕೊಡುವಂಥ ವ್ಯವಸ್ಥೆ ಮಾಡಬೇಕು. ಈ ನೀರಾವರಿ ಯೋಜನೆಗೆ ಸಂಬಂಧಪಟ್ಟಂತೆ ಹೆಚ್ಚು ನೀರು ಬರುವಂಥ ಬೋರ್‌ವೆಲ್ಲಿಗೆ ಅಲ್ಲೇ ಒಂದು ಟ್ಯಾಂಕ್ ಕಟ್ಟಿ ಇಡೀ ಊರಿಗೆ ನೀರು ಸರಬರಾಜು ಮಾಡತಕ್ಕಂಥ ವ್ಯವಸ್ಥೆ ಮಾಡಬೇಕು. ಏಕೆಂದರೆ, ಈ ಕಿರು ನೀರು ಯೋಜನೆ ಆಡಿ ನಮಗೆ ಅನುಕೂಲ ಸಿಗುವುದಿಲ್ಲ ರಾಷ್ಟ್ರೀಯ ನೀರಾವರಿ ಯೋಜನೆ ಆಡಿ ನಮಗೆ ಸಿಗುವುದಿಲ್ಲ ಎನ್ನತಕ್ಕಂಥ ವಿಚಾರವನ್ನು ತಮ್ಮ ಗಮನಕ್ಕೆ ತರಲಿಕ್ಕೆ ನಾನು ಇಚ್ಚಿಪಡುತ್ತೇನೆ. ಜೊತೆಗೆ ಈ ವಸತಿ ಬಗ್ಗೆ ಒಂದು ಕಾರ್ಯಕ್ರಮವನ್ನು ನೀವು ಹಮ್ಮಿ ಕೊಳ್ಳಬೇಕಾಗಿದೆ. ಹುಡ್ಕೋ ಮನೆಗಳನ್ನು ಕಟ್ಟುತಕ್ಕಂಥಾದ್ದು ಕೇಂದ್ರ ಮತ್ತು ರಾಜ್ಯದ ನಡುವೆ ಇರತಕ್ಕಂಥಾದ್ದು. ಅದೇ ರೀತಿ ರಾಜ್ಯಗಳೂ ಕೂಡ ಒಂದು ವಸತಿ ನಿಗಮವನ್ನು ಸ್ಥಾಪನೆ ಮಾಡಿ ನಮ್ಮ ಹಳ್ಳಿ ಪ್ರದೇಶದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಇರತಕ್ಕಂಥ ಜನರ ವಸತಿ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ರಾಜ್ಯದ್ದೇ ಒಂದು ಕಾರ್ಯಕ್ರಮ ಹಾಕಿಕೊಂಡು ನೀವು ಆ ಬಗ್ಗೆ ಯೋಚನೆ ಮಾಡಬೇಕು ಎಂದು ತಮ್ಮ ಗಮನಕ್ಕೆ ತರುತ್ತೇನೆ. ಕೆರೆ ಮತ್ತು ನೀರಾವರಿ ಸೌಲಭ್ಯಗಳು ನಮ್ಮ ಮಲೆನಾಡು ಪ್ರದೇಶಗಳಿಗೆ ಇತ್ತೀಚೆಗೆ ಬಹಳಷ್ಟು ಕಡಿಮೆಯಾಗಿದೆ. ಇತ್ತೀಚೆಗೆ, ೧೦ ವರ್ಷಗಳಿಂದೀಚೆಗೆ ನಮ್ಮ ಮಲೆನಾಡು ಪ್ರದೇಶದಲ್ಲಿ ನೀರಾವರಿ ಸೌಲಭ್ಯಕ್ಕೆ ಸಂಬಂಧಪಟ್ಟಿರತಕ್ಕಂಥ ಅಭಿವೃದ್ಧಿಯನ್ನು ಹೋಲಿಸಿ ನೋಡಿದರೆ ಬಹಳ ನಿರಾಸೆಯಾಗತಕ್ಕಂಥಾದ್ದಿದೆ. ಆದುದರಿಂದ ತಾವು ಈ ಬಗ್ಗೆ ಗಮನ ಕೊಡಬೇಕು ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಎರಡೂ ಸೂಚನೆಗಳನ್ನು ನಾನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ :

"ರ್ಗಲನೇ ಇಸವಿಯ ಕರ್ನಾಟಕ ಧನ ವಿನಿಯೋಗ (ಸಂಖ್ಯೆ ೨) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.

ಖಂಡ ೨ ಮತ್ತು ೩

ಅಧ್ಯಕ್ಷರು.—"ಖಂಡ ೨ ಮತ್ತು ೩ ವಿರಡು ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

† ಈ ಟಿಪ್ಪಣಿ ಮಾನ್ಯ ಸದಸ್ಯರು ಟಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ :

"ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮವು ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, 1988ನೇ ಇಸವಿಯ ಕರ್ನಾಟಕ ಧನ ವಿನಿಯೋಗ (ಸಂಖ್ಯೆ-2) ವಿಧೇಯಕವನ್ನು ಅಂಗೀಕರಿಸ ಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ :

"1988ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ-2) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

11-30 ಎ. ಎಂ.

ಈಗ ಗಮನ ಸೆಳೆಯುವ ಸೂಚನೆ

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನನ್ನ ಪೆಲ್ಡ್ ಓಪರ್ ಪ್ರಶ್ನೆ ಇದೆ. ತಾವು ಸಭೆಯನ್ನು ಇದ್ದಕ್ಕಿದ್ದ ಹಾಗೆ ಅಡ್ಜರ್ನ್ ಮಾಡಿದರೆ ಕಷ್ಟವಾಗುತ್ತದೆ.

ಅಧ್ಯಕ್ಷರು.—ನೀವು ಇಷ್ಟೆಲ್ಲಾ ಸಹಕಾರ ಕೊಟ್ಟಿದ್ದೀರಿ. ನಾನು ಹಾಗೆ ಮಾಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಬಿ.ಓ.ಡಿ. ರಿಪೋರ್ಟನ್ನು ಆ ಮನೆಯಲ್ಲಿ ಇಡುತ್ತೇವೆಂದು ಹೇಳಿದ್ದೀರಿ. ಇವತ್ತು ಆ ಮನೆ ಇದೆ. ಆದ್ದರಿಂದ ಅಲ್ಲಿ ಮತ್ತು ಇಲ್ಲಿ ಇಡುತ್ತೀರಾ ?

ಅಧ್ಯಕ್ಷರು.—ನೋಡೋಣ ಹೇಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಾವು ಪಾಸು ಮಾಡಿಕೊಟ್ಟಮೇಲೆ ಹೀಗೆ ಹೇಳಿದರೆ ಹೇಗೆ ?

(ಆಡಳಿತ ಪಕ್ಷದ ಸುಮಾರು ಸದಸ್ಯರುಗಳು ಮಂತ್ರಿಗಳ ಹತ್ತಿರ ಬಂದು ಸೇರಿದ್ದರು)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಕ್ಯಾಮಿ, ಇದೇನು ?

ಅಧ್ಯಕ್ಷರು.—ದಯವಿಟ್ಟು ತಾವು ಲಾಂಜ್‌ಗೆ ಹೋಗಿ.

ಗಮನ ಸೆಳೆಯುವ ಸೂಚನೆ

(೧) ವರಾಹಿ ಜಲವಿದ್ಯುತ್ ಯೋಜನೆಯಲ್ಲಿ ಮುಳುಗಡೆ ಆಗಲಿರುವ ರಸ್ತೆಗೆ ಬದಲಿ ರಸ್ತೆ ನಿರ್ಮಾಣ

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ವರಾಹಿ ಜಲವಿದ್ಯುತ್ ಯೋಜನೆಯಲ್ಲಿ ಮುಳುಗಡೆಯಾಗಲಿರುವ ರಸ್ತೆಗೆ ಬದಲಿ ರಸ್ತೆ ಮಾಡುವ ವಿಚಾರದಲ್ಲಿ ಭಾರಿ ಪುಧ್ಯಮ ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುಚ್ಛಕ್ತಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಇವರು ವರಾಹಿ ಜಲವಿದ್ಯುತ್ ಯೋಜನೆಯನ್ನು ಕೈಗೊಂಡಿದ್ದಾರೆ. ಇದರಿಂದ ತೀರ್ಥಹಳ್ಳಿ-ಹುಲಿಕಲ್ ರಸ್ತೆಯ ಕೆಲವು ಭಾಗವು ಮುಳುಗಡೆಯಾಗುತ್ತದೆ. ಹೀಗೆ ಮುಳುಗಡೆಯಾಗಲಿರುವ ರಸ್ತೆಗೆ ಬದಲಿ ರಸ್ತೆಯನ್ನು ನಿರ್ಮಾಣ ಮಾಡಲು ಕೆಳಕಂಡ ಎರಡು ಅಲೈನ್‌ಮೆಂಟ್‌ಗಳನ್ನು ಪರಿಶೀಲಿಸಲಾಯಿತು.